₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 13.11.2025 ಸಂಪುಟ: 10 ಸಂಚಿಕೆ: 302 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಾಲಿವುಡ್ ನಟ ಗೋವಿಂದ ಆಸ್ಪತ್ರೆಯಿಂದ ಬಿಡುಗಡೆ

ಬಾಲಿವುಡ್ ನಟ ಗೋವಿಂದ ಮಂಗಳವಾರ ತಡರಾತ್ರಿ ಮುಂಬೈನ ತಮ್ಮ ನಿವಾಸದಲ್ಲಿ ಪ್ರಜ್ಞೆ ತಪ್ಪಿ ಕುಸಿದುಬಿದ್ದಿದ್ದಾರೆ. ಅವರನ್ನು ಮುಂಬೈನ ಜುಹು ಉಪನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೂಕ್ತ ಚಿಕಿತ್ಸೆ ಪಡೆದ ನಂತರ ಗೋವಿಂದ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಸೊಂಪಾದ ಪುಟಗಳು

ರಿಸ್ಕ್ ಇದ್ದಾಗಲೇ ಬದುಕು ಮತ್ತಷ್ಟು ರೋಚಕ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ವಿದ್ಯಾವಂತರೇಕೆ ಕೇಡಿನ ಹಾದಿ ತುಳಿದಿದ್ದಾರೆ?
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ



ಏನನ್ನು ಹೇಳಬೇಕು ಎಂದು ತಿಳಿಸುವುದು ಜ್ಞಾನ. ಏನು ಹೇಳಬೇಕು ಮತ್ತು ಏನು ಹೇಳಬಾರದು ಎಂದು ತಿಳಿಸುವುದು ವಿವೇಕ. ಏನೂ ಮಾತಾಡದೇ ಸುಮ್ಮನಿರುವುದು ಬುದ್ಧಿವಂತಿಕೆ. ನೀವು ಜ್ಞಾನಿಗಳಾ, ವಿವೇಕಶಾಲಿಗಳಾ, ಬುದ್ಧಿವಂತರಾ ಎಂಬುದನ್ನು ನೀವೇ ನಿರ್ಧರಿಸಬಹುದು.

ವಕ್ರತುಂಡೋಕ್ತಿ

ಗಂಡ-ಹೆಂಡತಿ ಪರಸ್ಪರ ಮಾತಾಡದೇ, ಅವರ ಪರವಾಗಿ ವಕೀಲರು ಮಾತಾಡುತ್ತಿದ್ದಾರೆ ಅಂದ್ರೆ ಅವರು ಡೈವೋರ್ಸ್ ಗೆ ಅರ್ಜಿ ಹಾಕಿದ್ದಾರೆ ಎಂದರ್ಥ.

ದೆಹಲಿ ಸ್ಫೋಟದ ನಿಜವಾದ ಗುರಿ ಮುಂದಿನ ವರ್ಷ ಜ.26: ಉಗ್ರನ ತನಿಖೆ ವೇಳೆ ಮಾಹಿತಿ
ಬಾಬರಿ ಮಸೀದಿ ಧ್ವಂಸದ ದಿನದಂದೇ ಸ್ಫೋಟಕ್ಕೆ ಸಂಚು | ಇನ್ನೂ ಮೂರು ವೈದ್ಯರ ಬಂಧನ

ಗಣತಂತ್ರ ದಿನವೇ ಸ್ಫೋಟಕ್ಕೆ ಸಂಚು

ದೆಹಲಿ: ರಾಜಧಾನಿ ದೆಹಲಿಯ ಕೆಂಪುಕೋಟೆ ಬಳಿ ಸೋಮವಾರ ಇಳಿಸಂಜೆ ಸಂಭವಿಸಿದ ಭೀಕರ ಬಾಂಬ್ ಸ್ಫೋಟದ ನಿಜವಾದ ಗುರಿ ಬೇರೆಯೇ ಇತ್ತೆನ್ನುವುದು ಬಂಧಿತ ಉಗ್ರರ ತನಿಖೆ ವೇಳೆ ತಿಳಿದುಬಂದಿದೆ. ಮುಂದಿನ ವರ್ಷ ಜ.26ರಂದು ನಡೆಯಬೇಕಿರುವ ಗಣರಾಜ್ಯೋತ್ಸವದಂದು ಕೆಂಪುಕೋಟೆ ಬಳಿ ಸ್ಫೋಟಕ್ಕೆ ಸಿದ್ಧತೆ ಸಾಗಿತ್ತು. ಇನ್ನೊಂದು ಅಂದಾಜಿನ ಪ್ರಕಾರ ಈ ವರ್ಷ ಡಿ.6ರಂದು ಬಾಬರಿ ಮಸೀದಿ ಧ್ವಂಸದ ದಿನವೇ ಸ್ಫೋಟಿಸಲು ಯೋಜಿಸಲಾಗಿತ್ತು ಎನ್ನಲಾಗಿದೆ. ಬಂಧಿತ 'ಉಗ್ರ ವೈದ್ಯ' ಡಾ.ಮುಜಮ್ಮಿಲ್ ಗನಯಿಯ ಮೊಬೈಲ್‌ನಲ್ಲಿ ಸಿಕ್ಕ ಮಾಹಿತಿ ಉಗ್ರರ ಸಂಚಿನ ಬಗ್ಗೆ ಬೆಳಕು ಚೆಲ್ಲಿವೆ.

ದೆಹಲಿ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮುಜಮ್ಮಿಲ್ ತನಿಖಾಧಿಕಾರಿಗಳಿಗೆ ತಿಳಿಸಿರುವ ಪ್ರಕಾರ, ಆ ಪ್ರದೇಶದಲ್ಲಿ ನಡೆದ ಸ್ಫೋಟಕ್ಕೂ ಮೊದಲು ತಾನು ಮತ್ತು ಉಮರ್ ಕೆಂಪುಕೋಟೆಯಿಂದ ಹಿಂದಿರುಗಿ ಬಂದಿದ್ದೆವು. ಮೊದಲು ಕೆಂಪುಕೋಟೆಯನ್ನು ಗುರಿಯಾಗಿಸಿ ದಾಳಿ ಮಾಡುವ ಯೋಜನೆಯಿತ್ತು. ಹಾಗಾಗಿ ಹಲವು ಬಾರಿ ಕೆಂಪುಕೋಟೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಓಡಾಡಿದ್ದೆವು ಎಂದು ತಿಳಿಸಿದ್ದಾನೆ.

ಈ ದೀಪಾವಳಿಯಂದು ಜನದಟ್ಟಣೆ ಇರುವ ಸ್ಥಳದ ಮೇಲೆ ದಾಳಿ ಮಾಡುವ ಯೋಜನೆಯಿತ್ತು. ಆದರೆ ಅದನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ. ಆ ಸಂಚು ವಿಫಲವಾದ ನಂತರ, ಭಯೋತ್ಪಾದಕರು ಜ.26, ಅಂದರೆ ಗಣರಾಜ್ಯೋತ್ಸವವನ್ನು ಆರಿಸಿಕೊಂಡರು. ಅದಕ್ಕೂ ಮೊದಲು ಅಹಮದಾಬಾದ್, ಫರೀದಾಬಾದ್ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಪೊಲೀಸರು ತೆಗೆದುಕೊಂಡ ತ್ವರಿತ ಕ್ರಮವು ಉಗ್ರರ ಸಂಚನ್ನು ಹಾಳು ಮಾಡಿತು ಎನ್ನಲಾಗಿದೆ.

ಫರೀದಾಬಾದ್‌ನ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಮುಜಮ್ಮಿಲ್ ಅವರ ಸಹಾಯಕ ಮತ್ತು ಸಹೋದ್ಯೋಗಿ ಉಮರ್ ಕೆಂಪುಕೋಟೆ ಮೆಟ್ರೋ ನಿಲ್ದಾಣದ ಬಳಿಯ ಟ್ರಾಫಿಕ್ ಸಿಗ್ನಲ್ ಬಳಿ ಕಾರು ಸ್ಫೋಟಗೊಂಡು ಸಾವನ್ನಪ್ಪಿದ್ದಾನೆ ಎಂದು ಹೇಳಲಾಗುತ್ತಿದೆ. ಆತ ಚಲಾಯಿಸುತ್ತಿದ್ದ ಕಾರಿನಲ್ಲಿ 80 ಕಿಲೋ ಸ್ಫೋಟಕ ಇತ್ತು ಎನ್ನಲಾಗಿದೆ.

ಇನ್ನೂ ಸಿದ್ಧವಾಗಿಲ್ಲದ ಬಾಂಬ್: ಮೂಲಗಳ ಪ್ರಕಾರ ದೆಹಲಿಯಲ್ಲಿ ಸಿಡಿದಿರುವ ಬಾಂಬ್ ಇನ್ನೂ ಪೂರ್ತಿಯಾಗಿ ಸಿದ್ಧವಾಗಿರಲಿಲ್ಲ. ಒಂದು ವೇಳೆ ಪಕ್ಕಾ ಬಾಂಬ್ ಆಗಿದ್ದರೆ ಹಾನಿಯ ಪ್ರಮಾಣ ಇನ್ನೂ ತೀವ್ರವಾಗಿರುತ್ತಿತ್ತು ಎನ್ನಲಾಗಿದೆ.

→ 4

ದೆಹಲಿಯ ಎಲ್‌ಎನ್‌ಜೆಪಿ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಬಾಂಬ್ ಸ್ಫೋಟದಲ್ಲಿ ಗಾಯಗೊಂಡಿರುವವರ ಆರೋಗ್ಯ ವಿಚಾರಿಸಿದರು.

ಉಗ್ರರಿಗೆ ಕಠಿಣ ಶಿಕ್ಷೆ ಖಚಿತ: ಕೇಂದ್ರ ಪಣ

ದೆಹಲಿಯಲ್ಲಿ ನಡೆದ ಕಾರು ಸ್ಫೋಟವನ್ನು ಭೀಕರ ಉಗ್ರ ಕೃತ್ಯ ಎಂದು ಬಣ್ಣಿಸಿರುವ ಕೇಂದ್ರ ಸರಕಾರ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಖಚಿತ ಎಂದು ಹೇಳಿದೆ. ಬುಧವಾರ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. ಈ ಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿ ಪ್ರಮುಖರು ಹಾಜರಿದ್ದರು. ಪ್ರಧಾನ ಮಂತ್ರಿ ಅವರ ನಿವಾಸದಲ್ಲಿ ಸಭೆ ಸೇರಿದ ಕೇಂದ್ರ ಸಚಿವ ಸಂಪುಟವು, ದಾಳಿಯನ್ನು ಖಂಡಿಸುವ ಔಪಚಾರಿಕ ನಿರ್ಣಯವನ್ನು ಅಂಗೀಕರಿಸುವ ಮೊದಲು ಸಂತ್ರಸ್ತರಿಗೆ ಗೌರವ ಸಲ್ಲಿಸುವ ಸಲುವಾಗಿ 2 ನಿಮಿಷ ಮೌನಾಚರಣೆ ನಡೆಸಿತು. ಕಟುವಾದ ಶಬ್ದಗಳಲ್ಲಿ ದಾಳಿಯನ್ನು ಖಂಡಿಸಿದ ಕೇಂದ್ರ, ಇದನ್ನು ರಾಷ್ಟ್ರವಿರೋಧಿ ಶಕ್ತಿಗಳು ನಡೆಸಿದ ಹೀನ ಕೃತ್ಯ ಎಂದು ಕರೆದಿದೆ. ಜತೆಗೆ ಭಯೋತ್ಪಾದನೆಯನ್ನು ತಾನು ಸಹಿಸುವುದಿಲ್ಲ ಎಂದು ಪುನರುಚ್ಚರಿಸಿದೆ. ಇದರ ಬೆನ್ನಿಗೇ ಮೋದಿ ನೇತೃತ್ವದಲ್ಲಿ ಭದ್ರತಾ ಸಭೆಯೂ ನಡೆಯಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಭದ್ರತಾ ಸಲಹೆದಾರ ಅಜಿತ್ ದೋವಲ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಕ್ಷಣಾ ಪಡೆ ಮುಖ್ಯಸ್ಥರು ಪಾಲ್ಗೊಂಡಿದ್ದರು.

ಸಭೆಯ ಬಗ್ಗೆ ಮಾಹಿತಿ ನೀಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಈ ಘಟನೆಯ ತನಿಖೆಯನ್ನು ಅತ್ಯಂತ ತುರ್ತಾಗಿ ಮತ್ತು ವೃತ್ತಿಪರತೆಯಿಂದ ಮುಂದುವರಿಸಲು ಸಂಪುಟವು ನಿರ್ದೇಶಿಸಿದೆ. ದುಷ್ಕರ್ಮಿಗಳು, ಸಹಚರರು ಮತ್ತು ಅವರಿಗೆ ಕುಮ್ಮಕ್ಕು ನೀಡಿದವರನ್ನು ಗುರುತಿಸಿ ಕಠಿಣ ಶಿಕ್ಷೆ ನೀಡಲು ನಿರ್ಣಯ ಕೈಗೊಳ್ಳಲಾಗಿದೆ.

ಸ್ಫೋಟಕ್ಕೂ ಮುಂಚೆ ಏನೇನಾಗಿತ್ತು?

1. ಅ.19ರಂದು ಜಮ್ಮುಕಾಶ್ಮೀರದ ಶ್ರೀನಗರ ಹಾಗೂ ನೌಗಾಮ್‌ನಲ್ಲಿ ಜೈಶ್ ಎ ಮೊಹಮ್ಮದ್‌ಗೆ ಸೇರಿದ ಆಕ್ಷೇಪಾರ್ಹ ಪೋಸ್ಟರ್‌ಗಳು ಪತ್ತೆ. ಈ ಬೆನ್ನಲ್ಲೇ ಮೌಲ್ವಿಗಳಾದ ಇರ್ಫಾನ್ ಅಹ್ಮದ್, ಜಮೀರ್ ಅಹ್ಮದ್ ಬಂಧನ.
2. ನ.5ರಂದು ಇದೇ ಪ್ರಕರಣದಲ್ಲಿ ಉತ್ತರಪ್ರದೇಶದಲ್ಲಿ ವೈದ್ಯ ಆದೀಲ್ ಪೊಲೀಸರ ಬಲೆಗೆ.
3. ನ.8ಕ್ಕೆ ಜಮ್ಮುಕಾಶ್ಮೀರದ ಅನಂತನಾಗ್‌ನಲ್ಲಿರುವ ಆಸ್ಪತ್ರೆಯೊಂದರಿಂದ ಎಕೆ-56 ರೈಫಲ್, ಇತರೆ ಸ್ಫೋಟಕಗಳು ವಶ. ತನಿಖೆಯ ವೇಳೆ ಸಿಕ್ಕ ಮಾಹಿತಿಯಿಂದ ಅಲ್ ಫತಾಹ್‌ನ ವೈದ್ಯ ಡಾ.ಮುಜಮ್ಮಿಲ್ ಗನಯಿ ಬಂಧನ.
4. ನ.10ರಂದು ಹರ್ಯಾಣದ ಮೇವಾಡದ ಅಲ್ ಫಲಾಹ್ ಮಸೀದಿಯ ಇಮಾಮ್ ಹಫೀಜ್ ಮೊಹಮ್ಮದ್ ಇಷ್ತಿಯಾಖ್ ನಿವಾಸದಿಂದ 2563 ಕೆಜಿ ಸ್ಫೋಟಕ ವಶ. ಸನಿಹದಲ್ಲೇ ಇದ್ದ ಇತರೆ ಜಾಗಗಳಿಂದ 358 ಕೆಜಿ ಸ್ಫೋಟಕವೂ ಪತ್ತೆ. ಒಟ್ಟು ಹತ್ತಿರಹತ್ತಿರ 3000 ಕೆಜಿ ಸ್ಫೋಟಕ ಪೊಲೀಸರ ವಶಕ್ಕೆ.
5. ಸ್ಫೋಟಕಗಳು, ಇತರೆ ಆರೋಪಿಗಳ ಬಂಧನದಿಂದ ಸ್ಫೋಟದ ರೂವಾರಿ ಉಮರ್ ನಬಿಗೆ ಗಾಬರಿ ಹುಟ್ಟಿಸಿರುವ ಸಾಧ್ಯತೆ. ದಿಢೀರ್ ಕಾರು ಬಾಂಬ್ ಸ್ಫೋಟಿಸಲು ನಿರ್ಧಾರವಾಗಿರುವ ಶಂಕೆ.

ನಬಿಗೆ ಸೇರಿದ್ದ ಕೆಂಪು ಕಾರು ವಶ

ಉಮರ್ ನಬಿಗೆ ಸೇರಿದ ಕೆಂಪು ಕಾರು ಇಕೋಸ್ಪೋರ್ಟ್ ಎಲ್ಲಿದೆ ಎಂಬ ಬಗ್ಗೆ ಪೊಲೀಸರು ವ್ಯಾಪಕ ಶೋಧ ನಡೆಸಿದ್ದರು. ಬುಧವಾರ ಈ ಕಾರನ್ನು ಹರ್ಯಾಣದ ಖಂಡವಾಲಿ ಹಳ್ಳಿಯ ಫಾರ್ಮ್‌ಹೌಸ್ ಒಂದರಲ್ಲಿ ವಶಪಡಿಸಿಕೊಳ್ಳಲಾಗಿದೆ. ನಬಿಯ ಸ್ನೇಹಿತನಿಗೆ ಸೇರಿದ ಜಾಗದಲ್ಲಿ ಇದು ಪತ್ತೆಯಾಗಿದೆ. ನಬಿಯ ಸ್ನೇಹಿತನನ್ನೂ ವಶಕ್ಕೆ ಪಡೆಯಲಾಗಿದೆ.

ಅಸ್ಸಾಮ್‌ನಲ್ಲಿ ಐವರ ಬಂಧನ

ದೆಹಲಿ ಸ್ಫೋಟದ ಬಗ್ಗೆ ವಿವಾದಾತ್ಮಕ ಪೋಸ್ಟ್ ಹಂಚಿಕೊಂಡ ಐವರು ಮುಸ್ಲಿಮ್ ವ್ಯಕ್ತಿಗಳನ್ನು ಅಸ್ಸಾಮ್‌ನಲ್ಲಿ ಬಂಧಿಸಲಾಗಿದೆ. ಇವರು ಕೋಮು ಗಲಭೆಯನ್ನು ಪ್ರಚೋದಿಸುವ ಪೋಸ್ಟ್ ಹಂಚಿಕೊಂಡಿದ್ದಾರೆ ಎನ್ನಲಾಗಿದೆ. ದರಾಂಗ್‌ನ ಮತಿಯುರ್ ರೆಹಮಾನ್, ಗೋಲಪಾರಾದ ಹಸನ್ ಅಲಿ ಮೊಂಡಲ್, ಚಿರಾಂಗ್‌ನ ಅಬ್ದುಲ್ ಲತೀಫ್, ಕಾಮರೂಪ್‌ನ ವಜುಲ್ ಕಮಲ್, ಬೊಂಗಾಯಿಗಾಂವ್‌ನ ನೂರ್ ಅಮೀನ್ ಅಹ್ಮದ್ ಬಂಧಿತರು. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಅಸ್ಸಾಮ್ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಇಂತಹ ಪ್ರಕರಣಗಳಲ್ಲಿ ಸಾಮಾಜಿಕ ಮಾಧ್ಯಮಗಳನ್ನು ದುರುಪಯೋಗ ಮಾಡಿಕೊಳ್ಳಲು ಬಿಡುವುದಿಲ್ಲ ಎಂದು ಗುಡುಗಿದ್ದಾರೆ.

2 ತಿಂಗಳೊಳಗೆ ಸಮೀಕ್ಷೆ ವರದಿ

ಬೆಂಗಳೂರು: ರಾಜ್ಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಎರಡೂವರೆ ತಿಂಗಳಲ್ಲಿ ಸಲ್ಲಿಸಲಿದೆ ಎಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಮೀಕ್ಷೆ ಗ್ರಾಮೀಣ ಭಾಗದಲ್ಲಿ ಶೇ.98ರಷ್ಟು ಪೂರ್ಣಗೊಂಡಿದ್ದು, ಜಿಬಿಎ ವ್ಯಾಪ್ತಿಯಲ್ಲಿ ಬಾಕಿಯಿದೆ. ಎಲ್ಲವನ್ನೂ ಒಟ್ಟುಗೂಡಿಸಿ ಇನ್ನೆರಡು ತಿಂಗಳ ಒಳಗಾಗಿ ಸರಕಾರಕ್ಕೆ ವರದಿ ಸಲ್ಲಿಕೆಯಾಗಲಿದೆ. ಆನ್‌ಲೈನ್‌ನಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸುವುದಕ್ಕೆ ನ.30ರವರೆಗೆ ಗಡುವನ್ನು ವಿಸ್ತರಣೆ ಮಾಡಲಾಗಿದೆ. ಕೆಲವು ಜಿಲ್ಲೆಗಳಲ್ಲಿ ಪೂರ್ಣಗೊಂಡಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಶೇ.92 ರಷ್ಟು ಸಮೀಕ್ಷೆಯಾಗಿದೆ ಎಂದು ವಿವರಿಸಿದ್ದಾರೆ.

ಕಚೇರಿಯಲ್ಲಿ ಕುಳಿತು ಸಮೀಕ್ಷೆ ನಡೆಸಲಾಗಿದೆ ಎಂಬ ಆರೋಪ ನಿರಾಧಾರ. ಜಿಪಿಎಸ್ ಆಧಾರಿತವಾಗಿ ಸಮೀಕ್ಷೆ ನಡೆದಿದೆ. ಸಮೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದವರು ಮನೆ ಮನೆಗೆ ತೆರಳಿ ಮಾಹಿತಿ ಕಲೆ ಹಾಕಿದ್ದಾರೆ. ಇತಿಹಾಸದಲ್ಲಿಯೇ ಈ ರೀತಿ ಕರಾರುವಕ್ಕಾಗಿ ಮಾಹಿತಿ ಕಲೆ ಹಾಕಿದ ಸಮೀಕ್ಷೆ ಬೇರೊಂದಿಲ್ಲ. ಯಾರು ಏನೇ ಟೀಕೆ ಮಾಡಿದರೂ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾತ್ರ ಅತ್ಯುತ್ತಮವಾಗಿ ನಡೆದಿದೆ ಎಂದು ಸಮರ್ಥಿಸಿಕೊಂಡರು.

ಪ್ರಿಯಾಂಕಾ ಮೊಬೈಲ್ ಹ್ಯಾಕರ್ ಬಂಧನ

ಬೆಂಗಳೂರು: ನಟ ಉಪೇಂದ್ರ ಹಾಗೂ ಪ್ರಿಯಾಂಕಾ ಮೊಬೈಲ್ ಹ್ಯಾಕ್ ಪ್ರಕರಣ ಸಂಬಂಧ ಆರೋಪಿ ಬಿಹಾರ ಮೂಲದ ವಿಕಾಸ್ ಕುಮಾರ್ ಎಂಬಾತನನ್ನು ಸದಾಶಿವ ನಗರದ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಬಂಧನಕ್ಕೆಂದು ಬಿಹಾರಕ್ಕೆ ಹೋದ ಪೊಲೀಸರೇ ಈ ಸೈಬರ್ ಖದೀಮರ ಜಾಲ ನೋಡಿ ಶಾಕ್ ಆಗಿದ್ದಾರೆ. 20ರಿಂದ 25 ವಯಸ್ಸಿನ ಯುವಕರು ಈ ದಂಧೆಯಲ್ಲಿ ನಿರತರಾಗಿದ್ದು, ಊರಿನ 150 ಮಂದಿ ಯುವಕರು ಸೈಬರ್ ಅಪರಾಧದಲ್ಲೇ ತೊಡಗಿಗೊಂಡಿರುವ ಆಘಾತಕಾರಿ ವಿಷಯ ಈ ವೇಳೆ ಬೆಳಕಿಗೆ ಬಂದಿದೆ. ಸದ್ಯ ಆರೋಪಿ ವಿಕಾಸ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ. ಸೆ.15ರಂದು ಉಪೇಂದ್ರ ದಂಪತಿ ಮೊಬೈಲ್ ಹ್ಯಾಕ್ ಆಗಿತ್ತು. ಆನ್‌ಲೈನ್‌ನಲ್ಲಿ ಕೆಲ ವಸ್ತುಗಳನ್ನು ಪ್ರಿಯಾಂಕಾ ಉಪೇಂದ್ರ ಬುಕ್ ಮಾಡಿದ್ದರು. ಈ ವೇಳೆ ಮೊಬೈಲ್‌ಗೆ ಲಿಂಕ್ ಬಂದಿದ್ದು, ಆ ಲಿಂಕ್ ಅನ್ನು ಪ್ರಿಯಾಂಕ ಕ್ಲಿಕ್ ಮಾಡಿದ್ದರು. ಬಳಿಕ ನಟಿ ಪ್ರಿಯಾಂಕಾ ವಾಟ್ಸ್ಆ್ಯಪ್ ಹ್ಯಾಕ್ ಮಾಡಿದ್ದ ಖದೀಮ, ಅವರ ಸಂಪರ್ಕದಲ್ಲಿದ್ದವರಿಗೆ 55 ಸಾವಿರ ಹಣ ಕಳುಹಿಸುವಂತೆ ಸಂದೇಶ ಮಾಡಿದ್ದ. ಪ್ರಿಯಾಂಕಾ, ಉಪೇಂದ್ರ ಮೊಬೈಲ್ ಕೂಡ ಹ್ಯಾಕ್ ಆಗಿತ್ತು.

ಎನ್‌ಡಿಎಗೆ ಖುಷಿ ತಂದ ಸಮೀಕ್ಷೆ, ಘಟಬಂಧನ್‌ಗೆ ಆತಂಕ
ನಾಳೆ ಬಿಹಾರ ಚುನಾವಣೆ ಫಲಿತಾಂಶ

ಪಟನಾ: ನ.6 ಮತ್ತು ನ.11ರಂದು 2 ಹಂತಗಳಲ್ಲಿ ನಡೆದ ಬಿಹಾರ ಚುನಾವಣೆ ಫಲಿತಾಂಶ ನ.14ರಂದು ಪ್ರಕಟವಾಗಲಿದೆ. ಮತದಾನ ಮುಗಿದ ಬೆನ್ನಲ್ಲೇ ಪ್ರಕಟವಾಗಿರುವ ಸಮೀಕ್ಷೆಗಳಲ್ಲಿ ಎನ್‌ಡಿಎ ಪರ ವರದಿಗಳು ಬಂದಿವೆ. ಇದು ಮಹಾಘಟಬಂಧನ್‌ಗೆ ಆತಂಕ ತಂದಿದೆ. ಒಟ್ಟು 243 ಕ್ಷೇತ್ರಗಳ ಬಿಹಾರ ಚುನಾವಣೆಯಲ್ಲಿ ಬಹುಮತಕ್ಕೆ 122 ಸ್ಥಾನಗಳು ಬೇಕು. ಎಲ್ಲ ಸಮೀಕ್ಷೆಗಳನ್ನು ಪರಿಗಣಿಸಿ ಸರಾಸರಿ ತೆಗೆದಾಗ ಜೆಡಿಯು-ಬಿಜೆಪಿ ಮೈತ್ರಿಕೂಟದ ಎನ್‌ಡಿಗೆ 146, ಆರ್‌ಜೆಡಿ-ಕಾಂಗ್ರೆಸ್‌ನ ಮಹಾಘಟಬಂಧನಕ್ಕೆ 92 ಸ್ಥಾನಗಳು ಬರುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ.

ಬಹುತೇಕ ಸಮೀಕ್ಷೆಗಳು ಎನ್‌ಡಿಎ ಪರ ಇದ್ದರೂ, ಆ್ಯಕ್ಸಿಸ್ ಮೈ ಇಂಡಿಯಾ ಎನ್‌ಡಿಎಗೆ ಬಹುಮತ ತಪ್ಪಿದರೂ ತಪ್ಪಬಹುದು ಎಂದಿದೆ. ಎನ್‌ಡಿಎಗೆ ಗಾಬರಿ ಹುಟ್ಟಿಸಿರುವ ಸಂಗತಿಯೆಂದರೆ ಮತ ಪ್ರಮಾಣ. ಸಮೀಕ್ಷೆಗಳ ಸರಾಸರಿ ಪ್ರಕಾರ ಎನ್‌ಡಿಎಗೆ ಶೇ.43, ಮಹಾಘಟಬಂಧನಕ್ಕೆ ಶೇ.41 ಮತ ಬರಲಿದೆ. ಇಲ್ಲಿ ಕೇವಲ ಶೇ.2 ಮತಪ್ರಮಾಣ ವ್ಯತ್ಯಾಸವಾಗಲಿದೆ.

ಸಂಸ್ಥೆ	ಎನ್‌ಡಿಎ	ಘಟಬಂಧನ್	ಜೆಎಸ್‌ಪಿ	ಇತರೆ
ಪಿ-ಮಾರ್ಕ್	142-162	80-98	1-4	0-3
ಭಾಸ್ಕರ್	145-160	73-91	-	5-10
ಪೋಲ್‌ಸ್ಟ್ರಾಟ್	133-148	87-102	-	3-5
ಚಾಣಕ್ಯ	148-172	65-89	-	3-9
ಆ್ಯಕ್ಸಿಸ್	121-141	98-118	0-2	1-5

ಅಮಿತ್ ಶಾ ಸಿದ್ಧಪಡಿಸಿದ ಸಮೀಕ್ಷಾ ಫಲಿತಾಂಶಗಳನ್ನು ಪಿಎಂಒ ಮಾಧ್ಯಮಗಳಿಗೆ ಕಳುಹಿಸುತ್ತದೆ. ಅದನ್ನೇ ಮಾಧ್ಯಮಗಳು ಪ್ರಸಾರ ಮಾಡುತ್ತವೆ. 2020ರ ಚುನಾವಣೆಗೆ ಹೋಲಿಸಿದರೆ ಈ ಬಾರಿ ಹೆಚ್ಚುವರಿ 72 ಲಕ್ಷ ಮತ ಚಲಾವಣೆಯಾಗಿದೆ. ಇದು ನಿತೀಶ್‌ರನ್ನು ಬದಲಾಯಿಸಲು.
-ತೇಜಸ್ವಿ ಯಾದವ್, ಮಹಾಘಟಬಂಧನ್

ಸಮೀಕ್ಷೆಯಲ್ಲೇನಿದೆ?

1. ಬಿಹಾರದಲ್ಲಿ ಒಟ್ಟು ವಿಧಾನಸಭಾ ಸ್ಥಾನ 243, ಬಹುಮತಕ್ಕೆ ಬೇಕಿರುವುದು 122 ಸ್ಥಾನ
2. ಬಹುತೇಕ ಸಮೀಕ್ಷೆಗಳಲ್ಲಿ ಎನ್‌ಡಿಎಗೆ ಬಹುಮತ, ಘಟಬಂಧನ್‌ಗೆ ಹಿನ್ನಡೆ
3. ಎನ್‌ಡಿಎ ಮತಗಳಿಕೆ ಪ್ರಮಾಣ ಶೇ.43 ಮಾತ್ರ, ಘಟಬಂಧನ ಶೇ.41 ಮತಗಳಿಕೆ
4. ಅಂತರ ಶೇ.2 ಮಾತ್ರ: ಎನ್‌ಡಿಎಗೆ ಆತಂಕ

ಹಾರಂಗಿ: ಇಬ್ಬರು ವಿದ್ಯಾರ್ಥಿಗಳ ಸಾವು

ಮಡಿಕೇರಿ: ಹಾರಂಗಿ ಹಿನ್ನೀರಿನಲ್ಲಿ ಈಜಲು ತೆರಳಿದ್ದ ಇಬ್ಬರು ವಿದ್ಯಾರ್ಥಿಗಳು ನೀರುಪಾಲಾದ ಘಟನೆ ಕುಶಾಲನಗರ ಸಮೀಪದ ಹೇರೂರು ಗ್ರಾಮದಲ್ಲಿ ನಡೆದಿದೆ. ಸುಂಟಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸುಂಟಿಕೊಪ್ಪ ಪೊಲೀಸರು, ಕುಶಾಲನಗರ ಅಗ್ನಿ ಶಾಮಕ ದಳದ ಸಿಬ್ಬಂದಿ ಹಾಗೂ ದುಬಾರೆ ರ‍್ಯಾಫ್ಟರ್‌ಗಳು ಮೃತದೇಹಗಳಿಗಾಗಿ ಶೋಧ ಕಾರ್ಯ ನಡೆಸಿದರು. ಮಡಿಕೇರಿ ನಗರದ ಜ್ಯೂನಿಯರ್ ಕಾಲೇಜ್‌ನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿರುವ ಹೆಬ್ಬೆಟ್ಟಗೇರಿ ಗ್ರಾಮ ನಿವಾಸಿ ಪಾಂಡೀರ ಪೂವಯ್ಯ ಎಂಬುವವರ ಪುತ್ರ ಚಂಗಪ್ಪ (17) ಹಾಗೂ ಕಾಲೂರು ಗ್ರಾಮದ ನಿವಾಸಿ ಚನ್ನಪಂಡ ತಮ್ಮಯ್ಯ ಎಂಬುವವರ ಪುತ್ರ ತರುಣ್ ತಿಮ್ಮಯ್ಯ(17) ಎಂಬುವವರೇ ಮೃತ ವಿದ್ಯಾರ್ಥಿಗಳಾಗಿದ್ದಾರೆ. ಘಟನೆ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಂದುವರಿದ ಕಬ್ಬಿಗರ ಹೋರಾಟ

ಬಾಗಲಕೋಟೆ: ಬಾಗಲಕೋಟೆ ಜಿಲ್ಲೆಯ ಮುಧೋಳ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕಬ್ಬಿನ ರೈತರ ಹೋರಾಟ ಮುಂದುವರಿದಿದೆ. ಮುಧೋಳದ ಲೋಕೋಪಯೋಗಿ ಇಲಾಖೆಯಲ್ಲಿ ಮಂಗಳವಾರ ತಡರಾತ್ರಿವರೆಗೂ ನಡೆದ ಅಧಿಕಾರಿಗಳು ಹಾಗೂ ರೈತರ ಸಭೆಯಲ್ಲಿ ಸರಕಾರದ ತೀರ್ಮಾನ ಒಪ್ಪದ ರೈತ ಮುಖಂಡರು ಬುಧವಾರ ತಾಲೂಕಿನ ಪ್ರತಿಯೊಂದು ರಸ್ತೆಗಳನ್ನು ಬಂದ್ ಮಾಡಿದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ದೆಹಲಿಯ ಹಿಟ್ನಾಳ್ ಮನೆಯಲ್ಲಿ ಸಿಎಂ ಡಿನ್ನರ್ ಪಾರ್ಟಿ ಆಪ್ತ ಸಚಿವರು, ಶಾಸಕರು ಮತ್ತು ಸಂಸದರು ಭಾಗಿ
ಸುದ್ದಿ



ಜೈಲಾತಿಥ್ಯ: ನಾಲ್ವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಕಳೆದ ಕೆಲ ದಿನಗಳಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿನ ಕೈದಿಗಳಿಗೆ ವಿಶೇಷ ಆತಿಥ್ಯ ನೀಡುತ್ತಿರುವ ಕುರಿತು ಹಲವು ಆರೋಪಗಳು ಕೇಳಿಬಂದಿವೆ. ಈ ಸಂಬಂಧ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕೈದಿಗಳ ಡಾನ್ಸ್ ವಿಡಿಯೋ ಜತೆಗೆ ಜೈಲಿನಲ್ಲಿದ್ದ ಕೈದಿಗಳು ಕೈಯಲ್ಲಿ ಮೊಬೈಲ್ ಹಿಡಿದು, ಐಷಾರಾಮಿ ಜೀವನ ನಡೆಸುತ್ತಿದ್ದ ವಿಡಿಯೋಗಳು ವೈರಲ್ ಆಗಿದ್ದವು. ರೌಡಿ ಶೀಟರ್ ಗುಬ್ಬಚ್ಚಿ ಸೀನಾ ಹುಟ್ಟುಹಬ್ಬ ಆಚರಿಸಿದ ವಿಡಿಯೋಗಳೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಹಿನ್ನೆಲೆ ಜೈಲು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿತ್ತು. ಈ ಎಲ್ಲಾ ಪ್ರಕರಣಗಳ ಕುರಿತು ಎಚ್ಚೆತ್ತ ಗೃಹ ಇಲಾಖೆ ಆಂತರಿಕ ತನಿಖೆಗೆ ಮುಂದಾಗಿದೆ. ಡಾನ್ಸ್ ವಿಡಿಯೋಗೆ ಸಂಬಂಧ ಪಟ್ಟಂತೆಯೂ ಎಫ್‌ಐಆರ್ ದಾಖಲಾಗಿದೆ.

ತಿಮರೋಡಿ, ಮಟ್ಟಣ್ಣವರ್ ತನಿಖೆಗೆ ಹೈ ಸಮ್ಮತಿ
ಎಸ್‌ಐಟಿ ತನಿಖೆ ತಡೆ ತೆರವು

ಬೆಂಗಳೂರು: ಧರ್ಮಸ್ಥಳ ತಲೆಬುರುಡೆ ಪ್ರಕರಣ ತನಿಖೆ ವಿಚಾರವಾಗಿ ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಧರ್ಮಸ್ಥಳ ಠಾಣೆಯ ಎಫ್‌ಐಆರ್ 39/2025 ತನಿಖೆಗೆ ಅ.30ರಂದು ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿದ್ದು, ತನಿಖೆಗೆ ಅನುಮತಿ ನೀಡಿದೆ. ಹೀಗಾಗಿ ಗಿರೀಶ್ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ, ಟಿ. ಜಯಂತ್ ಹಾಗೂ ವಿಠ್ಠಲ ಗೌಡ ಎಸ್‌ಐಟಿ ತನಿಖೆಯನ್ನು ಮತ್ತೆ ಎದುರಿಸಬೇಕಿದೆ.

ಪ್ರಕರಣ ಸಂಬಂಧ ಎಸ್‌ಐಟಿ ಪರ ವಾದಿಸಿದ್ದ ವಿಶೇಷ ಅಭಿಯೋಜಕ ಬಿ.ಎನ್. ಜಗದೀಶ್, ಮ್ಯಾಜಿಸ್ಟ್ರೇಟ್ ಅನುಮತಿ ಪಡೆದ ನಂತರವೇ ತನಿಖೆ ನಡೆಸಲಾಗುತ್ತಿದೆ. ಎಸ್‌ಐಟಿ ತನಿಖೆಯನ್ನು ಅರ್ಜಿದಾರರೇ ಹೊಗಳಿದ್ದಾರೆಂದು ನ್ಯಾಯಾಲಯಕ್ಕೆ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ತನಿಖೆಗೆ ನೀಡಿದ್ದ ತಡೆಯಾಜ್ಞೆ ತೆರವುಗೊಳಿಸಿ, ಆರೋಪಿಗಳಿಗೆ ಕಿರುಕುಳ ನೀಡದಂತೆ ಮಧ್ಯಂತರ ಆದೇಶ ವಿಸ್ತರಣೆ ಮಾಡಿ ನ್ಯಾ.ಮೊಹಮ್ಮದ್ ನವಾಜ್ ಅವರಿದ್ದ ಹೈ ಪೀಠದಿಂದ ಆದೇಶ ಮಾಡಿದೆ.

ಅರ್ಜಿದಾರರ ಪ್ರಚೋದನೆ ಮೇಲೆಯೇ ಚಿನ್ನಯ್ಯ ದೂರು ನೀಡಿದ್ದಾನೆ. ನಂತರ 164 ರಡಿ ಹೇಳಿಕೆ ನೀಡಿ ಅರ್ಜಿದಾರರ ಮೇಲೆ ಆರೋಪ ಮಾಡಿದ್ದಾನೆ. ಮೊದಲು ಇವರನ್ನು ಸಾಕ್ಷಿಗಳಾಗಿ ಪರಿಗಣಿಸಲಾಗಿತ್ತು, ಈಗ ಆರೋಪಿಗಳನ್ನಾಗಿಸಿ ನೋಟಿಸ್ ನೀಡಲಾಗಿದೆ. 35(3) ಅಡಿ ನೋಟಿಸ್ ಜಾರಿಗೊಳಿಸಿದ ಬಳಿಕ ಅರ್ಜಿದಾರರು ಬಂದಿಲ್ಲ. ಈಗ ಹೊಸದಾಗಿ ನೋಟಿಸ್ ಜಾರಿ ಗೊಳಿಸಲಾಗಿದೆ ಎಂದು ಜಗದೀಶ್ ತಿಳಿಸಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಎದುರು ಸಚಿವ ಜಾರಕಿಹೊಳಿ ಆಗ್ರಹ
ಡಿಕೆಶಿ ಸಿಎಂ ಬದಲಾವಣೆ ಪಟ್ಟಿಗೆ ಸಿದ್ದು ಬಣದಿಂದ ಸಂಘಟನೆ ಪುನಾರಚನೆ ಎದಿರೇಟು
ಕೆಪಿಸಿಸಿ ಅಧ್ಯಕ್ಷರನ್ನೇ ಬದಲಿಸಿ: ಸತೀಶ್ ದಾಳ

ಬೆಂಗಳೂರು: ಬಿಹಾರ ವಿಧಾನಸಭಾ ಚುನಾವಣಾ ಮತದಾನಕ್ಕೆ ಕ್ಷಣಗಣನೆ ಆರಂಭವಾಗುತ್ತಿರುವ ಹೊತ್ತಿನಲ್ಲಿಯೇ, ರಾಜ್ಯ ಕಾಂಗ್ರೆಸ್‌ನಲ್ಲಿಯೂ 'ಬದಲಾವಣೆ'ಗೆ ಪೂರಕವಾದ ಚಟುವಟಿಕೆಗಳು ಬಿರುಸಿನಿಂದ ಆರಂಭ ಗೊಂಡಿವೆ.

ಬಿಹಾರ ಚುನಾವಣಾ ಪ್ರಕ್ರಿಯೆ ಮುಗಿಯುವ ತನಕ ಯಾವುದೇ ಚರ್ಚೆ ಬೇಡ ಎಂದಿದ್ದ ಹೈಕಮಾಂಡ್ ಮಾತಿನಂತೆ, ಮತದಾನ ಮುಗಿಯುವ ತನಕ ಮೌನವಾಗಿದ್ದ ಹಲವು ನಾಯಕರು ಇದೀಗ ತಮ್ಮ ವಾದವನ್ನು ಮಂಡಿಸಲು ಶುರು ಮಾಡಿದ್ದಾರೆ. ಚಟುವಟಿಕೆ ವೇಗ ಪಡೆದುಕೊಂಡಿದ್ದರೂ, ಡಿ.ಕೆ.ಶಿವಕುಮಾರ್ ಬಳಗ ಈ ಹಂತದಲ್ಲಿಯೂ 'ಮೌನ'ಕ್ಕೆ ಶರಣಾಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು ಮಾತ್ರ 'ಸಿಎಂ ಬದಲಾವಣೆ'ಯಿಲ್ಲ ಎನ್ನುವ ಕೂಗನ್ನು ವ್ಯವಸ್ಥಿತವಾಗಿ ಹೆಚ್ಚಿಸುತ್ತಿದ್ದಾರೆ.

ಇಷ್ಟು ದಿನ ಸಂಪುಟ ಪುನಾರಚನೆ, ಮುಖ್ಯಮಂತ್ರಿ ಬದಲಾವಣೆ ಸೀಮಿತವಾಗಿದ್ದ ಚರ್ಚೆಗೆ ಇದೀಗ ಹೊಸ ತಿರುವನ್ನು ನೀಡುವ ಪ್ರಯತ್ನವನ್ನು ಸಚಿವ ಸತೀಶ್ ಜಾರಕಿಹೊಳಿ ಮಾಡಿದ್ದಾರೆಯೇ ಎನ್ನುವ ಪ್ರಶ್ನೆಗಳು ಶುರುವಾಗಿದೆ. ದೆಹಲಿಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿರುವ ಸತೀಶ್ ಜಾರಕಿಹೊಳಿ ಅವರು, ಮುಖ್ಯಮಂತ್ರಿ ಬದಲಾವಣೆಗೂ ಮೊದಲು ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸುವ ಮೂಲಕ ಸಂಘಟನೆಗೆ ಒತ್ತು ನೀಡಬೇಕು ಎನ್ನುವ ಗಾಳವನ್ನು ಉರುಳಿಸಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಕಳೆದೊಂದು ವರ್ಷದಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಸತೀಶ್ ಜಾರಕಿಹೊಳಿ ಅವರು ಭೇಟಿಯ ವೇಳೆ, ದೇಶಾದ್ಯಂತ ಸಂಘಟನೆಗೆ ಒತ್ತು ನೀಡುತ್ತಿರುವ ಸಮಯದಲ್ಲಿ ಕರ್ನಾಟಕದಲ್ಲಿಯೂ ಕೇಡರ್‌ಗಳನ್ನು ಬಲಪಡಿಸಿ ಕೊಳ್ಳಬೇಕಿದೆ. ಮುಂಬರಲಿರುವ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸುವುದು ಸೂಕ್ತ ಎನ್ನುವ ದಾಳವನ್ನು ಉರುಳಿಸಿದ್ದಾರೆ ಎಂದು ತಿಳಿದುಬಂದಿದೆ.

ಸತೀಶ್ ಅವರ ಈ ಬೇಡಿಕೆಗೆ ಸುರ್ಜೇವಾಲ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎನ್ನುವ ಸ್ಪಷ್ಟನೆ ಜಾರಕಿಹೊಳಿ ಅವರಿಗೆ ಇದ್ದರೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಪ್ರಸ್ತಾಪ ಮಂಡಿಸಿರುವುದು ಹಲವು ಚರ್ಚೆಗೆ ಕಾರಣವಾಗಿದೆ. ಆದರೆ ಮೂಲಗಳ ಪ್ರಕಾರ, ಒಂದು ವೇಳೆ ನಾಯಕತ್ವ ಬದಲಾವಣೆ ಎನ್ನುವ ಕೂಗನ್ನು ಡಿ.ಕೆ. ಶಿವಕುಮಾರ್ ಅವರು ಮುನ್ನೆಲೆಗೆ ತಂದರೆ ಆಗ ಮುಖ್ಯಮಂತ್ರಿಗಳ ಬದಲಾವಣೆಯ ಮೊದಲು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಬೇಕಿದೆ ಎನ್ನುವ ಬೇಡಿಕೆಗೆ ಬುಧವಾರ ವೇದಿಕೆ ಸಿದ್ಧಪಡಿಸಿದ್ದಾರೆ ಎನ್ನಲಾಗುತ್ತಿದೆ.

ಪಟ್ಟು-ಪ್ರತಿಪಟ್ಟೇನು?

- ಮುಖ್ಯಮಂತ್ರಿ ಬದಲಾವಣೆ ಒತ್ತಡದ ಬಗ್ಗೆ ಡಿಕೆಶಿ ಬಣ ಮೌನ
- ಸಿದ್ದು ಆಪ್ತರಿಂದ ಮತ್ತೆಮತ್ತೆ 'ಸಿಎಂ ಬದಲಾವಣೆಯಿಲ್ಲ' ಹೇಳಿಕೆ
- ದೆಹಲಿಯಲ್ಲಿ ಸುರ್ಜೇವಾಲ ಭೇಟಿಯಾದ ಸತೀಶ್ ಜಾರಕಿಹೊಳಿ
- ಬೆಂಗಳೂರಲ್ಲಿ ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಭೇಟಿಯಾದ ಜಮೀರ್

ಖರ್ಗೆ ಭೇಟಿಯಾದ ಸಿದ್ದು ಆಪ್ತ ಜಮೀರ್

ಸಿದ್ದರಾಮಯ್ಯ ಅವರ ಆಪ್ತವಲಯದಲ್ಲಿ ಕಾಣಿಸಿಕೊಂಡಿರುವ ಜಮೀರ್ ಅಹ್ಮದ್ ಅವರು ಖರ್ಗೆ ಅವರನ್ನು ಭೇಟಿಯಾಗಿರುವುದು ಬಹುಚರ್ಚಿತ ವಿಷಯವಾಗಿದೆ. ಖರ್ಗೆ ನಿವಾಸದ ಮುಂದೆಯೇ ಜಮೀರ್ ಅವರು 'ಸಿಎಂ ಹುದ್ದೆಯೂ ಖಾಲಿಯಿಲ್ಲ; ಕೆಪಿಸಿಸಿ ಅಧ್ಯಕ್ಷ ಸ್ಥಾನವೂ ಖಾಲಿಯಿಲ್ಲ' ಎನ್ನುವ ಹೇಳಿಕೆ ಇದೀಗ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಖರ್ಗೆ ಅವರನ್ನು ಭೇಟಿಯಾದ ಬಳಿಕ ಜಮೀರ್ ಅವರು ಮುಂದಿನ ಅವಧಿಯಲ್ಲಿ ಡಿಕೆ ಸಿಎಂ ಆಗಲಿ ಎನ್ನುವ ಹೇಳಿಕೆಯನ್ನು ನೀಡುವ ಮೂಲಕ ಸಿದ್ದರಾಮಯ್ಯ ಅವರ ಪರವಾಗಿ ಭರ್ಜರಿ ಬ್ಯಾಟಿಂಗ್ ಮಾಡಿದ್ದಾರೆ.

ಶಿವಕುಮಾರ್ 2028ಕ್ಕೆ ಸಿಎಂ ಆಗಬೇಕು, ಅಲ್ಲಿಯವರೆಗೆ ಸಿದ್ದರಾಮಯ್ಯ ಸಿಎಂ ಎಂದು ಖರ್ಗೆ ನಿವಾಸದ ಮುಂದೆ ಜಮೀರ್ ಹೇಳಿದ್ದರೆ ಬಹಳ ಸಂತೋಷ. ನಾವು ಸಿಎಂ ಜೊತೆಯಲ್ಲಿ ಕೆಲಸ ಮಾಡುತ್ತಿದ್ದೇವೆ, ಒಟ್ಟಿಗೆ ಇದ್ದೇವೆ, ಮುಂದೆಯೂ ಇರುತ್ತೇವೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

2028ರವರೆಗೆ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. 2028ರಲ್ಲಿಯೂ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಆಗ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲಿ. ಅದಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ. ಆಗ ಅವರಿಗೆ ಅವಕಾಶವಿದೆ.
-ಜಮೀರ್ ಅಹ್ಮದ್, ಸಚಿವ

PRESIDENT

ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್

CIN: L32109KA1984PLC079103

ನೋಂದಾಯಿತ ಕಚೇರಿ: 5ಸಿ/1, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅತ್ತಿಬೆಲೆ, ಬೆಂಗಳೂರು–562107, ಕರ್ನಾಟಕ, ಭಾರತ

ದೂರವಾಣಿ: + 91 8067888300; ಇ–ಮೇಲ್ : companysecretary@se.com, ವೆಬ್‌ಸೈಟ್ : www.schneiderelectricpresident.com

ಸೆಪ್ಟಂಬರ್ 30, 2025ಕ್ಕೆ ಅಂತ್ಯಗೊಂಡ 2ನೇ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಮುಕ್ತಾಯದ ಆರ್ಥಿಕ ಫಲಿತಾಂಶಗಳ ಹೇಳಿಕೆಗಳು

ಸೆಪ್ಟಂಬರ್ 30, 2025ಕ್ಕೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪರಿಶೋಧಕ ಮತ್ತು ಅಪಾಯ ನಿರ್ವಹಣಾ ಸಮಿತಿಯು ಪರಿಶೀಲನೆ ನಡೆಸಿದೆ ಮತ್ತು 12ನೇ ನವೆಂಬರ್ 2025 ರಂದು ನಡೆದ ನಿರ್ದೇಶಕ ಮಂಡಳಿಯ ಸಭೆಯು ಅಂಗೀಕರಿಸಿದೆ. ಹೇಳಲಾದ ಫಲಿತಾಂಶಗಳನ್ನು ಮೆಟ್ರೋ ಪಾಲಿಟನ್ ಸ್ಟಾಕ್ ಎಕ್ಸ್‌ಚೇಜ್ ನಲ್ಲಿ ನಿಯಂತ್ರಣ 33 ರ ಸೆಬಿ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಮತ್ತು ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್) ನಿಯಂತ್ರಣ, 20215 ರಂತೆ ಫೈಲ್ ಮಾಡಲಾಗಿದೆ.

ಆರ್ಥಿಕ ಫಲಿತಾಂಶಗಳು ಲಭ್ಯವಿರುವುದು:

ಮೆಟ್ರೋಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.msei.in

ಕಂಪನಿಯ ವೆಬ್‌ಸೈಟ್ **https://www.schneiderelectricpresident.com/investors/annual-reports-financials.html**

ಈ ಸಂವಹನದಲ್ಲಿ ನೀಡಲಾದ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕವೂ ವಿವರಗಳನ್ನು ಪಡೆದುಕೊಳ್ಳಬಹುದು.

ಪ್ರಮುಖ ಮಾಹಿತಿ:

(I) ಸದಸ್ಯರು ತಮ್ಮ ಕೆವೈಸಿ ವಿವರಗಳು ಅಂದರೆ ಪ್ಯಾನ್, ವಿಳಾಸ, ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತಾ ವಿವರಗಳು, ಇ–ಮೇಲ್ ವಿಳಾಸ ಮತ್ತು ನಾಮಿನೇಶನ್ ಇವುಗಳನ್ನು ಅಪ್‌ಡೇಟ್ ಮಾಡಲು ಕೋರಲಾಗಿದೆ. ಭೌತಿಕ ರೂಪದಲ್ಲಿ ಕಂಪನಿಯ ಷೇರುಗಳನ್ನು ಹೊಂದಿರುವ ಎಲ್ಲಾ ಷೇರುದಾರರು ತಮ್ಮ ಕೆವೈಸಿ ವಿವರಗಳನ್ನು ಸೆಬಿಯು ಕಡ್ಡಾಯಗೊಳಿಸಿರುವುದರಿಂದ ಕಂಪನಿಯ ಆರ್‌ಟಿಎ ಗೆ ಲಿಖಿತ ಮೂಲಕ rnt.helpdesk@in.mpms.mufg.com ಗೆ ಇ–ಮೇಲ್ ಕಳುಹಿಸಿ ತಮ್ಮ ಸೆಕ್ಯುರಿಟಿಗಳನ್ನು ಡಿಮೆಟೀರಿಯಲೈಸ್ಡ್ ರೂಪದಲ್ಲಿಡಲು ಸಲಹೆ ನೀಡಲಾಗಿದೆ. ಮುಂದುವರಿದು, ಎಲೆಕ್ಟ್ರಾನಿಕ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಕೆವೈಸಿ ವಿವರಗಳನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್‌ಗಳ ಬಳಿ ಸಲ್ಲಿಸಲು ಕೋರಲಾಗಿದೆ.

(ii) **ಭೌತಿಕ ಷೇರುಗಳಿಗೆ ವರ್ಗಾವಣೆ ವಿನಂತಿಗಳ ಮರು–ನಿವೇಶನಕ್ಕಾಗಿ ವಿಶೇಷ ವಿಂಡೋ ತೆರೆಯುವಿಕೆ:** ಜುಲೈ 02, 2025 ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD-PoD/P/CIR/2025/97 ರ ಪ್ರಕಾರ, ಏಪ್ರಿಲ್ 01, 2019 ರ ಗಡುವಿನ ಮೊದಲು ಸಲ್ಲಿಸಲಾದ ಮತ್ತು ದಾಖಲೆಗಳು/ಪ್ರಕ್ರಿಯೆಯಲ್ಲಿನ ಕೊರತೆಯಿಂದಾಗಿ ತಿರಸ್ಕರಿಸಲ್ಪಟ್ಟ/ ಹಿಂದಿರುಗಿಸಲಾದ/ಪರಿಗಣಿಸದ ಭೌತಿಕ ಷೇರುಗಳ ವರ್ಗಾವಣೆ ವಿನಂತಿಗಳನ್ನು ಮರು–ನಿವೇಶನ ಮಾಡಲು/ ಅಥವಾ ತಾವು ಸ್ವತಃ ಅಗತ್ಯ ದಾಖಲೆಗಳನ್ನು ಕಂಪನಿಗೆಯ ಆರ್‌ಟಿಎ ಗೆ ಜುಲೈ 07, 2025 ರಿಂದ ಜನವರಿ 06, 2026 ರವರೆಗೆ ಸಲ್ಲಿಸಲು ಆರು (06) ತಿಂಗಳುಗಳ ಕಾಲ ವಿಶೇಷ ವಿಂಡೋವನ್ನು ತೆರೆಯಲಾಗಿದೆ.

ಅರ್ಹ ಹೂಡಿಕೆದಾರರು ತಮ್ಮ ರಿ–ಲಾಡ್ಜ್‌ಮೆಂಟ್ ವಿನಂತಿ ಜೊತೆಗೆ ಮನವಿ ದಾಖಲೆಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಇವರಿಗೆ ಮೇಲೆ ಹೇಳಲಾದ ಅವಧಿಯಲ್ಲಿ ಈ ಕೆಳಗೆ ನೀಡಲಾದ ಸಂಪರ್ಕ ವಿವರಗಳಿಗೆ ಸಲ್ಲಿಸುವುದು :

ಎಂಯುಎಫ್‌ಜಿ ಇನ್‌ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್ (ಮೊದಲು ಲಿಂಕ್ ಇನ್‌ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಎಂದಿತ್ತು)
ನೋಂದಾಯಿತ ಕಚೇರಿ : ಸಿ–101, ಎಂಬೆಸಿ 247, ಎಲ್.ಬಿ.ಎಸ್. ಮಾರ್ಗ್, ವಿಕ್ರೋಲಿ (ಪಶ್ಚಿಮ), ಮುಂಬಯಿ – 400 083
ದೂ : +91 810 811 6767, ಇ–ಮೇಲ್ : Investor.helpdesk@in.mpms.mufg.com
ವೆಬ್‌ಸೈಟ್ : https://in.mpms.mufg.com

ನಿರ್ದೇಶಕರ ಮಂಡಳಿಯ ಪರವಾಗಿ
ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ ಗಾಗಿ
ಸಹಿ/–
ಅನುಜ್ ಕುಡೇಸಿಯ
ವ್ಯವಸ್ಥಾಪಕ ನಿರ್ದೇಶಕ
ಡಿಐಎನ್: 10629156

ಸ್ಥಳ: ಗುರುಗ್ರಾಮ್
ದಿನಾಂಕ: ನವೆಂಬರ್ 12, 2025

Life Is On | Schneider Electric

PUBLIC NOTICE

This is to inform general public and whomsoever it may concern that my client **MR. KARAN DAVE and MRS. SAKSHI DAVE ALIAS SAKSHI PAL** are the owners of the schedule property. That They have lost Unregistered Sale agreement and original deed of declaration pertains to the schedule property Document **No. BGR-1-06340-2011-2012 Stored in CD No BGRD 114** Registered at the office of the Sub-Registrar, Begur Bangalore. And in this regard my Client has lodged a complaint before the Bangalore City Police on 11/11/2025, Vide Lost Report No.1896369 Any person/s finding the said documents or asserting any right, title, interest or claim should write/inform to the under signed ***within 7 days*** from the date of this notice with documentary proof on which she has basing & asserting her right, with regard to the schedule property, after which period it will be treated that there are no claim of whatsoever nature with regard to the schedule property.

SCHEDULE PROPERTY

Residential Apartment: Apartment **No 404** in the Fourth Floor measuring super built built up area **1269 sqft** (1123 sq.ft built up area and 146 common area) consisting of Three bedrooms and internal passages, situated in **'H Block of the Residential Complex "AJMERA INFINITY"** along with exclusive right to use one covered car parking space bearing no. B-260

Item No. 2: An undivided 0.08 % share i.e., 532 Square Feet in the land comprised in the Converted Survey No 89/1 90/1 91/1,100,156 all are sitauated At Doddathogur Village Bangalore South Taluk

Sd/-

Prasad Badhya., Advocate
#739/39, First Floor, Dr Rajkumar Road
6 th Block, Rajajinagar, Bangalore-560010
Mobile No.9844788741
Date: 12-11-2025

ನಾಲ್ವರು ವಿಚಾರಣಾಧೀನ ಕೈದಿಗಳ ವಿರುದ್ಧ ಎಫ್‌ಐಆರ್

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿನ ಕೈದಿಗಳು ಕೈಯಲ್ಲಿ ಮೊಬೈಲ್ ಹಿಡಿದು, ಐಷಾರಾಮಿ ಜೀವನ ನಡೆಸುತ್ತಿದ್ದ ವಿಡಿಯೋಗಳು ವೈರಲ್ ಹಿನ್ನೆಲೆಯಲ್ಲಿ ನಾಲ್ವರು ವಿಚಾರಣಾಧೀನ ಬಂಧಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕಾರ್ತಿಕ್, ಧನಂಜಯ, ಮಂಜುನಾಥ್ ಅಲಿಯಾಸ್ ಕೋಳಿ ಮಂಜ ಮತ್ತು ಚರಣ್ ರಾವ್ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬ್ಯಾರಕ್ 8ರ ಕೊಠಡಿ ಸಂಖ್ಯೆ 7ರಲ್ಲಿ ನಡೆದ ಡ್ಯಾನ್ಸ್‌ನಲ್ಲಿ ನಿಷೇಧಿತ ವಸ್ತುಗಳ ಬಳಕೆಯ ಆರೋಪ ಕೇಳಿ ಬಂದಿತ್ತು. ರೌಡಿ ಶೀಟರ್ ಗುಬ್ಬಚ್ಚಿ ಸೀನಾ ಹುಟ್ಟುಹಬ್ಬ ಆಚರಿಸಿದ ವಿಡಿಯೊಗಳೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಹಿನ್ನೆಲೆ ಜೈಲು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿತ್ತು. ಈ ಎಲ್ಲಾ ಪ್ರಕರಣಗಳ ಕುರಿತು ಎಚ್ಚೆತ್ತ ಗೃಹ ಇಲಾಖೆ ಆಂತರಿಕ ತನಿಖೆಗೆ ಮುಂದಾಗಿದೆ. ಬಂಧಿತರ ವೈರಲ್ ಆದ ಡ್ಯಾನ್ಸ್ ವಿಡಿಯೊಗೆ ಸಂಬಂಧ ಪಟ್ಟಂತೆಯೂ ಎಫ್‌ಐಆರ್ ದಾಖಲಾಗಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ರಾಜಾತಿಥ್ಯ ಘಟನೆಗೆ ಸಂಬಂಧಿಸಿದಂತೆ ಆಂತರಿಕ ತನಿಖೆ ಆರಂಭವಾಗಿದೆ. ಮೊಬೈಲ್ ಫೋನ್ ಬಳಸಿದ್ದ ಆರೋಪದ ಹಿನ್ನೆಲೆಯಲ್ಲಿ ಕೈದಿಗಳಾದ ತರುಣ್ ಕೊಂಡೂರು, ಸೀರಿಯಲ್ ಕಿಲ್ಲರ್ ಉಮೇಶ್ ರೆಡ್ಡಿ ಹಾಗೂ ಜುಹಾದ್ ಹಮೀದ್ ಶಕೀಲ್‌ರನ್ನು ಜೈಲು ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದಾರೆ. ಆರೋಪಿಗಳು ಮೊಬೈಲ್ ಬಳಕೆ ಹಾಗೂ ಜೈಲಿನೊಳಗಿನ ಬಿಂದಾಸ್ ಜೀವನಶೈಲಿ ಬಗ್ಗೆ ಬಾಯಿಬಿಟ್ಟಿದ್ದಾರೆ ಎಂದು ತಿಳಿದುಬಂದಿದೆ. ರೇಪಿಸ್ಟ್ ಉಮೇಶ್ ರೆಡ್ಡಿ, ತರುಣ್ ಕೊಂಡೂರು, ಶಂಕಿತ ಉಗ್ರ ಶಕೀಲ್‌ಗೆ ಜೈಲಿನಲ್ಲಿ ರಾಜಾತಿಥ್ಯ ನೀಡಿರುವ ವಿಡಿಯೊಗಳು ವೈರಲ್ ಆದ ನಡುವೆ ಮತ್ತೊಂದು ವಿಡಿಯೊ ಹೊರ ಬಂದಿದ್ದು, ಭಾರಿ ಚರ್ಚೆ ಹುಟ್ಟುಹಾಕಿತ್ತು.

ನಕಲಿ ದಾಖಲೆ ಸೃಷ್ಟಿಸಿ ಭೂ ಕಬಳಿಕೆ: ಎಫ್‌ಐಆರ್

ಬೆಂಗಳೂರು: ಬಂಡಾಪುರ ಗ್ರಾಮದಲ್ಲಿ 10 ಎಕರೆ ಜಮೀನು ಕಬಳಿಕೆಗೆ ನಕಲಿ ದಾಖಲೆ ಸೃಷ್ಟಿಸಿದ ಆರೋಪದ ಹಿನ್ನೆಲೆಯಲ್ಲಿ ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮೂಲ ಮಾಲೀಕರಾದ ರಾಧ ರವರ ಬಳಿ ಜಿಪಿಎ ಪಡೆದಿರುವ ವೆಂಕಟಪ್ಪ ಅವರು ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪಿಗಳಾದ ಅಶ್ವಿನ್ ಸಂಚೆಟಿ, ಬಸವೇಶ್ವರ ನಗರದ ನಿವಾಸಿ ರಾಧ, ಲೋಕ ಸುಂದರ್, ಧ್ರುವ ಕುಮಾರ್, ಮೀನಾಕ್ಷಿ, ಡಾ. ಲಾವಣ್ಯ, ಡಾಲರ್ಸ್ ಕಾಲೊನಿಯ ನಿವಾಸಿ ರಾಧಾ, ವೆಂಕಟರಾಮ ನಾಯ್ಡು ಕೋಲ, ಶಿವರುದ್ರಪ್ಪ, ಶ್ರೀನಿವಾಸ್ ಆರ್.ಹಳಕಟ್ಟಿ, ಲಿಂಗರಾಜ್, ಮಧುಸೂದರ್ ಮತ್ತು ಮುನೇಂದ್ರ ಅವರ ಮೇಲೆ ಎಫ್‌ಐಆರ್ ದಾಖಲಾಗಿದೆ. ಅವಲಹಳ್ಳಿ ಠಾಣಾ ವ್ಯಾಪ್ತಿಯಲ್ಲಿರುವ 10 ಎಕರೆ ಜಮೀನನ್ನು ಕಬಳಿಸಲು ನಕಲಿ ದಾಖಲೆ ಸೃಷ್ಟಿಸಿದ ಹಿನ್ನಲೆಯಲ್ಲಿ ವೆಂಕಟಪ್ಪ ಎಂಬುವವರು ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ಅ.22 ರಂದು ದೂರು ದಾಖಲಿಸಿದರು. ಬಂಡಾಪುರ ಗ್ರಾಮದ ಸರ್ವೆ ನಂ. 20,21,44/1 ರಲ್ಲಿ 10 ಎಕರೆ ಜಮೀನು ಇದೆ. 1978 ರಲ್ಲಿ ಮೂಲ ಮಾಲೀಕರಾದ ಮುದ್ದಪ್ಪರಿಂದ ಕೃಷ್ಣನ್ ಮತ್ತು ರಾಧ ದಂಪತಿಗಳು ಖರೀದಿ ಮಾಡಿದ್ದರು. ಇದಾದ ಬಳಿಕ 1986 ರಲ್ಲಿ ಕೃಷ್ಣನ್ ಮೃತ ಪಟ್ಟಿದ್ದರು. ದಂಪತಿಗೆ ಮಕ್ಕಳು ಇಲ್ಲದ ಕಾರಣ ತನ್ನ ಹುಟ್ಟೂರಿಗೆ ರಾಧ ತೆರಳಿದ್ದರು. ಕೃಷ್ಣನ್ ಮೃತ ಪಟ್ಟ ನಂತರ ಪೌತಿ ಖಾತೆಯಾಗಿ ರಾಧರ ಹೆಸರಿಗೆ ಖಾತೆಯಾಗಿತ್ತು. ಪತಿ ಮೃತರಾದ ನಂತರ ತಮಿಳುನಾಡಿಗೆ ರಾಧ ತಮಿಳುನಾಡಿಗೆ ತೆರಳಿದ್ದರು. ತಮಿಳುನಾಡಿನಿಂದ ಬಂದು ಜಮೀನು ಬಳಿ ನೋಡಿದಾಗ ನಕಲಿ ದಾಖಲೆ ಸೃಷ್ಟಿಸಿ ಕಬಳಿಕೆ ಮಾಡಿರುವುದು ಬೆಳಕಿಗೆ ಬಂದಿದೆ.

ಆರೋಪಿ ವಶಕ್ಕೆ

ನಕಲಿ ದಾಖಲೆ ಸೃಷ್ಟಿಸಿ ಸಾವಿರಾರು ಕೋಟಿ ಬೆಲೆ ಜಮೀನು ಕಬಳಿಕೆ ಆರೋಪ ಸಂಬಂಧ ಸತ್ವ ಗ್ರೂಪ್‌ನ ಅಶ್ವಿನ್ ಸಂಚೆಟಿ ಅವರನ್ನು ಆವಲಹಳ್ಳಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಉಳಿದ ಆರೋಪಿಗಳಿಗೆ ಹುಡುಕಾಟ ನಡೆಸಲಾಗುತ್ತಿದೆ.

ಯುವಕ ಆತ್ಮಹತ್ಯೆ

ಬೆಂಗಳೂರು: ಇಬ್ಬರು ಯುವತಿಯರ ಜತೆಗಿದ್ದ ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹುಳಿಮಾವು ಠಾಣೆ ವ್ಯಾಪ್ತಿಯ ಯಲ್ಲೇನಹಳ್ಳಿಯಲ್ಲಿ ನಡೆದಿದೆ. ವಿಷ್ಣು(39) ಆತ್ಮಹತ್ಯೆಗೆ ಶರಣಾದ ಯುವಕ. ನ.7 ರಂದು ನಡೆದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಯಲ್ಲೇನ ಹಳ್ಳಿಯ ರೆಡಿಯೆಂಟ್ ಶೈನ್ ಅಪಾರ್ಟ್‌ಮೆಂಟ್‌ನಲ್ಲಿ ಸೂರ್ಯಕುಮಾರಿ ಹಾಗೂ ಜ್ಯೋತಿ ಎಂಬ ಯುವತಿಯರ ಜತೆ ವಿಷ್ಣು ವಾಸವಿದ್ದ. ಯುವಕ ಜ್ಯೋತಿ ಜತೆ ರಿಲೇಷನ್ ಶಿಪ್‌ನಲ್ಲಿದ್ದ. ಜ್ಯೋತಿಗೂ ಮುಂಚೆ ಸೂರ್ಯಕುಮಾರಿ ಜತೆ ವಿಷ್ಣು ರಿಲೇಷನ್ ಶಿಪ್‌ನಲ್ಲಿದ್ದ. ಈ ವಿಚಾರಕ್ಕೆ ಮೂವರ ಮಧ್ಯೆಯೂ ಗಲಾಟೆ ಶುರುವಾಗಿದ್ದು, ಇದರಿಂದ ಬೇಸತ್ತು ವಿಷ್ಣು ಫ್ಲಾಟ್‌ನ ಬಾತ್ ರೂಮ್‌ನಲ್ಲಿ ನೇಣಿಗೆ ಶರಣಾಗಿದ್ದಾನೆ.

ಲೈಂಗಿಕ ಕಿರುಕುಳ

ಬೆಂಗಳೂರು: ಸ್ಕ್ಯಾನಿಂಗ್‌ಗೆ ಬಂದ ಹೆಣ್ಣು ಮಕ್ಕಳ ಖಾಸಗಿ ಅಂಗ ಮುಟ್ಟಿ ರೆಡಿಯಾಲಜಿಸ್ಟ್ ಲೈಂಗಿಕ ಕಿರುಕುಳ ನೀಡಿರುವ ಘಟನೆ ಆನೇಕಲ್‌ನಲ್ಲಿ ನಡೆದಿದೆ. ಆನೇಕಲ್ ಪಟ್ಟಣದ ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ರೆಡಿಯಾಲಜಿಸ್ಟ್ ಆಗಿ ಕೆಲಸ ಮಾಡುತ್ತಿದ್ದ ಆರೋಪಿ ಜಯಕುಮಾರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಇತ್ತೀಚಿಗೆ ಮಹಿಳೆಯೊಬ್ಬರು. ಹೊಟ್ಟೆ ನೋವೆಂದು ಪತಿಯೊಂದಿಗೆ ಸ್ಕ್ಯಾನಿಂಗ್ ಸೆಂಟರ್‌ಗೆ ಆಗಮಿಸಿದ್ದರು. ಈ ವೇಳೆ ಸ್ಕ್ಯಾನಿಂಗ್ ಮಾಡುವಾಗ ಮೈಕೈ ಮುಟ್ಟಿ ಖಾಸಗಿ ಅಂಗಗಳಿಗೆ ಕೈ ಹಾಕಿ, ಕಾಮಾಂಧ ಡಾಕ್ಟರ್ ವಿಕೃತಿ ಮೆರೆದಿದ್ದಾನೆ.

CreditAccess Life
Suraksha aur Samruddhi

FORM L-1-A-A-RA
Name of the Insurer: CreditAccess Life Insurance Limited
Registration No. and Date of Registration with the IRDAI:163, March 31, 2023
REVENUE ACCOUNT FOR THE HALF YEAR ENDED 30th SEPTEMBER 2025
Policyholders' Account (Technical Account)

(Amount in Rs. Lakhs)

Particulars	For half year ended September 30,2025							For half year ended September 30,2024						
	Total	Non-linked			Linked			Total	Non-linked			Linked		
		Individual		Group	Individual		Group		Individual		Group	Individual		Group
		Life	Pension		Life	Pension			Life	Pension		Life	Pension	
PREMIUMS EARNED - Net														
(a) Premium	38,243	-	-	38,243	-	-	-	5,139	-	-	5,139	-	-	-
(b) Reinsurance ceded	(2)	-	-	(2)	-	-	-	-	-	-	-	-	-	-
(c) Reinsurance accepted	-	-	-	-	-	-	-	-	-	-	-	-	-	-
SUB-TOTAL	**38,241**	-	-	**38,241**	-	-	-	**5,139**	-	-	**5,139**	-	-	-
INCOME FROM INVESTMENTS														
(a) Interest, Dividends & Rent – Gross	642	-	-	642	-	-	-	191	-	-	191	-	-	-
(b) Profit on sale/redemption of investments	378	-	-	378	-	-	-	138	-	-	138	-	-	-
(c) (Loss on sale/ redemption of investments)	(260)	-	-	(260)	-	-	-	(22)	-	-	(22)	-	-	-
(d)Transfer/Gain on revaluation/change in fair value	-	-	-	-	-	-	-	-	-	-	-	-	-	-
(e) Amortisation of Premium / Discount on investments	55	-	-	55	-	-	-	38	-	-	38	-	-	-
Other Income	-	-	-	-	-	-	-	11	-	-	11	-	-	-
Contribution from Shareholders' A/c														
(a) Towards Excess Expenses of Management	-	-	-	-	-	-	-	-	-	-	-	-	-	-
(b) Others	-	-	-	-	-	-	-	-	-	-	-	-	-	-
SUB-TOTAL	**815**	-	-	**815**	-	-	-	**356**	-	-	**356**	-	-	-
TOTAL (A)	**39,056**	-	-	**39,056**	-	-	-	**5,495**	-	-	**5,495**	-	-	-
COMMISSION	14,608	-	-	14,608	-	-	-	698	-	-	698	-	-	-
OPERATING EXPENSES RELATED TO INSURANCE BUSINESS	4,989	-	-	4,989	-	-	-	1,345	-	-	1,345	-	-	-
Provision for doubtful debts	-	-	-	-	-	-	-	-	-	-	-	-	-	-
Bad debts written off	-	-	-	-	-	-	-	-	-	-	-	-	-	-
Provision for Tax	-	-	-	-	-	-	-	-	-	-	-	-	-	-
Provisions (other than taxation)	-	-	-	-	-	-	-	-	-	-	-	-	-	-
(a) For diminution in the value of investments (Net)	-	-	-	-	-	-	-	-	-	-	-	-	-	-
(b) For others (to be specified)	-	-	-	-	-	-	-	-	-	-	-	-	-	-
Goods and Services Tax on ULIP Charges	-	-	-	-	-	-	-	-	-	-	-	-	-	-
TOTAL (B)	**19,597**	-	-	**19,597**	-	-	-	**2,043**	-	-	**2,043**	-	-	-
BENEFITS PAID (Net)	4,618	-	-	4,618	-	-	-	1,544	-	-	1,544	-	-	-
Interim Bonuses Paid	-	-	-	-	-	-	-	-	-	-	-	-	-	-
Change in valuation of liability in respect of life policies	-	-	-	-	-	-	-	-	-	-	-	-	-	-
(a) Gross	13,458	-	-	13,458	-	-	-	2,919	-	-	2,919	-	-	-
(b) Amount ceded in Reinsurance	-	-	-	-	-	-	-	-	-	-	-	-	-	-
(c) Amount accepted in Reinsurance	-	-	-	-	-	-	-	-	-	-	-	-	-	-
(d) Fund Reserve for Linked Policies	-	-	-	-	-	-	-	-	-	-	-	-	-	-
(e) Fund for Discontinued Policies	-	-	-	-	-	-	-	-	-	-	-	-	-	-
TOTAL (C)	**18,076**	-	-	**18,076**	-	-	-	**4,463**	-	-	**4,463**	-	-	-
SURPLUS/ (DEFICIT) (D) =(A)-(B)-(C)	**1,383**	-	-	**1,383**	-	-	-	**(1,010)**	-	-	**(1,010)**	-	-	-
Amount transferred from Shareholders' Account (Non-Technical Account)	-	-	-	-	-	-	-	1,010	-	-	1,010	-	-	-
AMOUNT AVAILABLE FOR APPROPRIATION	1,383	-	-	1,383	-	-	-	-	-	-	-	-	-	-
APPROPRIATIONS	-	-	-	-	-	-	-	-	-	-	-	-	-	-
Transfer to Shareholders' Account	1,383	-	-	1,383	-	-	-	-	-	-	-	-	-	-
Transfer to Other Reserves (to be specified)	-	-	-	-	-	-	-	-	-	-	-	-	-	-
Balance being Funds for Future Appropriations	-	-	-	-	-	-	-	-	-	-	-	-	-	-
TOTAL	**1,383**	-	-	**1,383**	-	-	-	-	-	-	-	-	-	-

FORM L-2-A-A-PL
Name of the Insurer: CreditAccess Life Insurance Limited
Registration No. and Date of Registration with the IRDAI:163, March 31, 2023
PROFIT & LOSS ACCOUNT FOR THE HALF YEAR ENDED 30th SEPTMBER 2025

Shareholders' Account (Non-technical Account) (Amount in Rs. Lakhs)

Particulars	For half year ended September 30, 2025	For half year ended September 30, 2024
Amounts transferred from the Policyholders Account (Technical Account)	1,383	-
Income From Investments	-	-
(a) Interest, Dividends & Rent – Gross	452	374
(b) Profit on sale/redemption of investments	800	1,135
(c) (Loss on sale/ redemption of investments)	(269)	(21)
(d) Amortisation of Premium / Discount on Investments	66	88
Other Income	1	1
TOTAL (A)	**2,433**	**1,577**
Expense other than those directly related to the insurance business	**51**	**30**
Contribution to Policyholders' A/c		
(a) Towards Excess Expenses of Management	-	-
(b) Others	-	-
Interest on subordinated debt	-	-
Expenses towards CSR activities	-	-
Penalties	-	-
Bad debts written off	-	-
Amount Transferred to Policyholders' Account	-	1,010
Provisions (Other than taxation)	-	-
(a) For diminution in the value of investments (Net)	-	-
(b) Provision for doubtful debts	-	-
(c) Others (to be specified)	-	-
TOTAL (B)	**51**	**1,040**
Profit/ (Loss) before tax	**2,382**	**537**
Provision for Taxation	347	78
Profit / (Loss) after tax	**2,035**	**459**
APPROPRIATIONS		
(a) Balance at the beginning of the year	1,350	62
(b) Interim dividend paid	-	-
(c) Final dividend paid	-	-
(d) Transfer to reserves/ other accounts (to be specified)	-	-
Profit/Loss carried forward to Balance Sheet	**3,385**	**521**

Notes:
1) This disclosure is made in accordance with IRDAI/F&A/CIR/MISC/256/09/2021 dated September 30,2021.
2) The audited accounts(Limited review) for the Half year ended September 30, 2025 have been approved in the meeting of the Board of Directors held on November 08, 2025.
3)The Previous year figures have been regrouped/reclassified wherever necessary, to conform to the current year presentation.

FORM L-3-A-A-BS
BALANCE SHEET AS AT 30th SEPTEMBER 2025

(Amount in Rs. Lakhs)

Particulars	As at September 30, 2025	As at September 30, 2024
Sources of Funds		
Shareholders' Funds:		
Share Capital	16,800	16,800
Share Application Money Pending Allotment	-	-
Reserves And Surplus	3,428	521
Credit/(Debit) Fair Value Change Account	352	639
Sub-Total	**20,580**	**17,960**
Borrowings	-	-
Policyholders' Funds:	-	-
Credit/(Debit) Fair Value Change Account	(140)	74
Policy Liabilities	31,884	10,169
Funds for discontinued policies:	-	-
(i) Discontinued on Account of non-payment of premiums	-	-
(ii) Others	-	-
Insurance Reserves	-	-
Provision for Linked liabilities	-	-
Sub-Total	**31,744**	**10,244**
Funds for Future Appropriations	-	-
Linked	-	-
Non-Linked (Non-PAR)	-	-
Non-Linked (PAR)	-	-
Deferred Tax Liabilities (Net)	-	-
TOTAL	**52,324**	**28,204**
Application of Funds		
Investments		
Shareholders'	16,199	12,553
Policyholders'	29,290	7,492
Assets held to cover Linked Liabilities	-	-
Loans		
Fixed Assets	570	231
Deferred Tax Assets (Net)		
Current Assets		
Cash and Bank Balances	731	194
Advances and Other Assets	7,405	8,457
Sub-Total (A)	**8,136**	**8,651**
Current Liabilities	1,703	641
Provisions	168	83
Sub-Total (B)	**1,871**	**724**
Net Current Assets (C) = (A – B)	**6,265**	**7,927**
Miscellaneous Expenditure (to the extent not written off or adjusted)	-	-
Debit Balance in Profit & Loss Account (Shareholders' Account)	-	-
Deficit in Revenue Account (Policyholders' A/c)		
TOTAL	**52,324**	**28,204**

Place :Bangalore
Date : 13/11/2025

For and on behalf of the Board of Directors

Sd/-
Diwakar R Boddupalli
Managing Director & CEO
DIN No. 02775640

FORM L-22A - ANALYTICAL RATIOS
Name of the Insurer: CreditAccess Life Insurance Limited

Analytical Ratios for Life Companies — **Date:30th September 2025**

Sl.No.	Particular	For half year ended September 30,2025	For half year ended September 30,2024
1	**New Business Premium Growth Rate**		
	(i) Linked Business	0	0%
	(ii) Non-Linked Business		
	Participating	0%	0%
	Non Participating	644%	155%
2	**Percentage of Single Premium (Individual Business) to Total New Business Premium (Individual Business)**	0	0%
3	**Percentage of Linked New Business Premium (Individual Business) to Total New Business Premium (Individual Business)**	0	0%
4	**Net Retention Ratio**	99.996%	100%
5	**Conservation Ratio (Segment wise)**		
	(i) Linked Business	-	0%
	(ii) Non-Linked Business	-	0%
	Participating	-	0%
	Non Participating	-	0%
6	**Expense of Management to Gross Direct Premium Ratio**	51%	40%
7	**Commission Ratio (Gross commission and Rewards paid to Gross Premium)**	38%	14%
8	**Ratio of Policyholders' Fund to Shareholders' funds**	154%	57%
9	**Change in networth (Amount in Rs. Lakhs)**	2907	852
10	**Growth in Networth**	15%	5%
11	**Ratio of Surplus to Policyholders' Fund**	4%	-10%
12	**Profit after tax / Total Income**	5%	6%
13	**(Total Real Estate + Loans)/(Cash & Invested Assets)**	0%	0%
14	**Total Investments/(Capital + Reserves and Surplus)**	225%	116%
15	**Total Affiliated Investments/(Capital+ Reserves and Surplus)**	NA	0%
16	**Investment Yield - (Gross and Net) -Fund wise and With/Without realised gain**		
	a. Shareholder's Fund:		
	Investment Yield - (Gross and Net) -Fund wise and With realised gain	4%	14%
	Investment Yield - (Gross and Net) -Fund wise and Without realised gain	17%	9%
	b. Policyholder;s Fund:		
	Investment Yield - (Gross and Net) -Fund wise and With realised gain	2%	6%
	Investment Yield - (Gross and Net) -Fund wise and Without realised gain	12%	4%
17	**Persistency Ratio - Premium Basis (Regular Premium / Limited Premium Payment under Individual category)**		
	For 13th month	NA	NA
	For 25th month	NA	NA
	For 37th month	NA	NA
	For 49th Month	NA	NA
	for 61st month	NA	NA
	Persistency Ratio - Number of Policy Basis (Regular Premium / Limited Premium Payment under Individual category)		
	For 13th month	NA	NA
	For 25th month	NA	NA
	For 37th month	NA	NA
	For 49th Month	NA	NA
	for 61st month	NA	NA
18	**NPA Ratio**		
	Policyholders' Funds		
	Gross NPA Ratio	NA	NA
	Net NPA Ratio	NA	NA
	Shareholders' Funds		
	Gross NPA Ratio	NA	NA
	Net NPA Ratio	NA	NA
19	**Solvency Ratio**	243%	345%
20	**Debt Equity Ratio**	NA	NA
21	**Debt Service Coverage Ratio**	NA	NA
22	**Interest Service Coverage Ratio**	NA	NA
23	**Average ticket size in Rs. - Individual premium (Non-Single)**	NA	NA

ಸಮಾಚಾರ ಸಣ್ಣದಲ್ಲ

ಚಡಗ ಕಾದಂಬರಿ ಪ್ರಶಸ್ತಿ

ಬೆಂಗಳೂರು: ಕಾದಂಬರಿಕಾರ ದಿ.ಸೂರ್ಯ ನಾರಾಯಣ ಚಡಗ ಕಾದಂಬರಿ ಪ್ರಶಸ್ತಿಗೆ 2024ರಲ್ಲಿ ಪ್ರಕಟವಾದ ರಮ್ಯ ಎಸ್. ಅವರು ರಚಿಸಿದ 'ವರ್ಣ ತಂತು' ಕಾದಂಬರಿ ಆಯ್ಕೆಯಾಗಿದೆ. ಕೋಟೇಶ್ವರದ ಎನ್.ಆರ್.ಎ.ಎಂ.ಎಚ್. ಪ್ರಕಾಶನದ ಆಶ್ರಯದಲ್ಲಿ ನಡೆದ ಈ ಪ್ರಶಸ್ತಿಯ ಆಯ್ಕೆಯಲ್ಲಿ ಹಲವು ಕಾದಂಬರಿಗಳಿದ್ದು, ಪ್ರಶಸ್ತಿಗೆ ಭಾಜನವಾದ 'ವರ್ಣತಂತು' ಕೃತಿಯ ಲೇಖಕರಿಗೆ ಪ್ರಶಸ್ತಿ ಪತ್ರ, ಸ್ಮರಣಿಕೆ ಮತ್ತು 10,000 ರು. ನೀಡಿ ಗೌರವಿಸಲಾಗುವುದು ಎಂದು ಪ್ರಶಸ್ತಿ ಸಮಿತಿಯ ಅಧ್ಯಕ್ಷ ಡಾ. ಎನ್. ಭಾಸ್ಕರ ಆಚಾರ್ಯ ತಿಳಿಸಿದ್ದಾರೆ.

ನ.14ರಿಂದ ಕಲಾಕೃತಿಗಳ ಪ್ರದರ್ಶನ

ಬೆಂಗಳೂರು: ಚಿತ್ರಕಲಾ ಪರಿಷತ್‌ನಲ್ಲಿ ನ.14ರಿಂದ 23ರವರೆಗೆ ಕಲಾಕೃತಿಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಕೊಲ್ಕತ್ತಾದ ವಿರಾಸತ್ ಆರ್ಟ್ ಮತ್ತು ಕರ್ನಾಟಕದ ಚಿತ್ರಕಲಾ ಪರಿಷತ್ತಿನ ವತಿಯಿಂದ ನ.14 ರಿಂದ 23ವರೆಗೆ ನಗರದ ಚಿತ್ರಕಲಾ ಪರಿಷತ್‌ನ ಗ್ಯಾಲರಿ 1ರಿಂದ 4ರಲ್ಲಿ 'ಹಿಂದುಸ್ತಾನ್ ಫೈಲ್ಸ್ 1757 –1950' ಇತಿಹಾಸ ಮತ್ತು ಪಂಪರೆಯನ್ನು ದಾಖಲೆಗೊಳಿಸುವ ಕಲಾಕೃತಿಗಳ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ವೇಳೆ ಕಲಾಕೃತಿಗಳ ಪ್ರದರ್ಶನದಲ್ಲಿ ಬ್ರಿಟಿಷ್ ಭಾರತದ ವಿಕಾಸದ ಚಿತ್ರಗಳು, ಸ್ವಾತಂತ್ರ್ಯಪೂರ್ವದ ವಸ್ತುಗಳು, ಆಧುನಿಕತೆಗಿಂತ ಮುಂಚಿನ ಭಾರತದ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಯ ಹೆಜ್ಜೆ ಹಾಗೂ ಇನ್ನಿತರ ಕಲಾಕೃತಿಗಳ ಪ್ರದರ್ಶನ ಮಾಡಲಾಗುವುದು. ಪ್ರದರ್ಶನವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಿಂಡಿಕೇಟ್ ಸದಸ್ಯರಾಗಿ ಜಯಂದರ್ ಸಿಂಗ್ ಆಯ್ಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಜಯಂದರ್ ಸಿಂಗ್ ನೇಮಕಗೊಂಡಿದ್ದಾರೆ. ರಮೇಶ್ ಬಾಬು ಅವರಿಂದ ತೆರವಾದ ಈ ಸ್ಥಾನಕ್ಕೆ ಎನ್‌ಎಸ್‌ಯುಐ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಜಯಂದರ್ ಸಿಂಗ್ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ. ಜಯಂದರ್ ಸಿಂಗ್ ನೇಮಕಕ್ಕೆ ಎನ್‌ಎಸ್‌ಯುಐ ಹರ್ಷ ವ್ಯಕ್ತಪಡಿಸಿದ್ದು, ಯುವ ನಾಯಕತ್ವ ಮತ್ತು ವಿದ್ಯಾರ್ಥಿಗಳ ಕಲ್ಯಾಣ ಮತ್ತು ಶೈಕ್ಷಣಿಕ ಸುಧಾರಣೆಗಾಗಿ ಜಯಂದರ್ ಸಿಂಗ್ ಅವರನ್ನು ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಳಿಸಿರುವುದು ಸ್ವಾಗತಾರ್ಹ ಎಂದಿದೆ.

ಹೊಸಕೆರೆಹಳ್ಳಿ ಜಂಕ್ಷನ್ ಮೇಲ್ಸೇತುವೆಯಲ್ಲಿ ಸಂಚಾರ

ಬೆಂಗಳೂರು: ನಗರದ ಹೊಸಕೆರೆಹಳ್ಳಿ ಜಂಕ್ಷನ್ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡಿದ್ದು, ಬುಧವಾರ (ನ.12) ದಿಂದ ಪ್ರಾಯೋಗಿಕವಾಗಿ ವಾಹನ ಸಂಚಾರಕ್ಕೆ ಮುಕ್ತವಾಗಿದೆ. ದೇವೇಗೌಡ ಪೆಟ್ರೋಲ್ ಬಂಕ್ ಮತ್ತು ನಾಯಂಡಹಳ್ಳಿ ನಡುವಿನ ಮಾರ್ಗದಲ್ಲಿ ಪ್ರತಿದಿನ ಸಂಚಾರ ದಟ್ಟಣೆಯಲ್ಲಿ ಸಿಲುಕಿ ಪರದಾಡುತ್ತಿದ್ದ ವಾಹನ ಸವಾರರಿಗೆ ಅನುಕೂಲಕರವಾಗಿದ್ದು, ಹೊಸಕೆರೆಹಳ್ಳಿ, ಇಟ್ಟಮಡು, ಆವಲಹಳ್ಳಿ, ಗಿರಿನಗರ, ಹನುಮಂತನಗರ, ನಾಯಂಡಹಳ್ಳಿ ಸೇರಿದಂತೆ ಸುತ್ತಮುತ್ತಲ ಪ್ರದೇಶದ ನಿವಾಸಿಗಳು ಹಾಗೂ ವಾಹನ ಸವಾರರಿಗೆ ವಾಹನದಟ್ಟಣೆಯಿಂದ ಕೊಂಚ ಪರಿಹಾರ ದೊರೆತಂತಾಗಿದೆ. 2021ರ ಮೇ ತಿಂಗಳಲ್ಲಿ ಆರಂಭಗೊಂಡು 2022ರ ಆಗಸ್ಟ್‌ನಲ್ಲೇ ಪೂರ್ಣವಾ ಗಬೇಕಾಗಿದ್ದ 20.17 ಕೋಟಿ ರು. ವೆಚ್ಚದ ಈ 380 ಮೀಟರ್ ಉದ್ದದ ಮೇಲ್ಸೇತುವೆ ಕಾಮಗಾರಿಯು ಗಡುವಿಗಿಂತ ಬರೋಬ್ಬರಿ 39 ತಿಂಗಳುಗಳಷ್ಟು ತಡವಾಗಿ ಪೂರ್ಣಗೊಂಡಿದೆ.

ಒಸಿ ವಿನಾಯಿತಿಯಿದರೂ ಮಾಲೀಕರಿಗೆ ತಪ್ಪದ ಸಂಕಷ್ಟ

ಬೆಂಗಳೂರು: ವಸತಿ ಕಟ್ಟಡಗಳಿಗೆ ಸ್ವಾಧೀನ ಪ್ರಮಾಣಪತ್ರ ಹಾಗೂ ನಿರ್ಮಾಣ ಮುಕ್ತಾಯ ಪ್ರಮಾಣಪತ್ರ ಸಿಗದೇ ಲಕ್ಷಾಂತರ ಜನರಿಗೆ ಸಮಸ್ಯೆಯಾದ ಹಿನ್ನೆಲೆ ಸರಕಾರ 30X40 ಚದರ ಅಡಿ ನಿವೇಶನದಲ್ಲಿ ಕಟ್ಟಿದ ಕಟ್ಟಡಗಳಿಗೆ ಒಸಿ ವಿನಾಯಿತಿ ನೀಡಿತ್ತು. ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಮನೆಗಳು ನಿರ್ಮಾಣವಾಗಿದ್ದರೂ, ವಿದ್ಯುತ್ ಸಂಪರ್ಕ ದೊರಕಿರಲಿಲ್ಲ. ಜನರ ಹಾಗೂ ವಿದ್ಯುತ್ ಗುತ್ತಿಗೆದಾರರ ಬೇಡಿಕೆ ಒತ್ತಾಯಕ್ಕೆ ಸರಕಾರ 30X40 ನಿವೇಶನದಲ್ಲಿನ ಕಟ್ಟಡಗಳಿಗೆ ಒಸಿ ಕಡ್ಡಾಯವಲ್ಲ ಎನ್ನುವ ನಿರ್ಧಾರಕ್ಕೆ ಬಂತು. ಜತೆಗೆ ಜಿ ಪ್ಲಸ್ ಟು ಫ್ಲೋರ್ ಮೀರದಂತೆ ಹಾಗೂ ಸ್ಟಿಲ್ಟ್ ಪ್ಲಸ್ ಮೂರು ಅಂತಸ್ತಿಗೆ ಅವಕಾಶ ನೀಡಿತು. ಅದರೂ ಸಾವಿರಾರು ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸಾಧ್ಯವಾಗುತ್ತಿಲ್ಲ. ಸ್ಟಿಲ್ಟ್ ಅಂದರೆ ಗ್ರೌಂಡ್ ಅಲ್ಲಿ ಸಂಪೂರ್ಣ ಪಾರ್ಕಿಂಗ್ ಬಿಡದೇ ರೂಮ್ ಹಾಗೂ ಮೂರನೇ ಫ್ಲೋರ್ ಮೇಲೆ ರೂಂ ಅಥವಾ ಟಾಯ್ಲೆಟ್ ನಿರ್ಮಿಸಿದ್ದರಿಂದ ವಿದ್ಯುತ್ ಸಂಪರ್ಕಕ್ಕೆ ಸಮಸ್ಯೆಯಾಗುತ್ತಿದೆ. 30X40 ವಿಸ್ತೀರ್ಣದ ಕಟ್ಟಡಗಳಿಗೆ ವಿನಾಯಿತಿ ಸಿಕ್ಕಿದರೂ ನಿವಾಸಿಗಳು ಈಗ ಸಂಕಷ್ಟಕ್ಕೆ ಸಿಲುಕಿದ್ದು, ಸಾವಿರಾರು ಕಟ್ಟಡಗಳಲ್ಲಿ ಇದೆ ಸಮಸ್ಯೆ ಅಂತಿದ್ದಾರೆ ವಿದ್ಯುತ್ ಗುತ್ತಿಗೆದಾರರು. ಒಟ್ಟು ಮೂರು ಅಂತಸ್ತಿಗೆ ಮಾತ್ರ ಸರಕಾರ ಅನುಮತಿ ನೀಡಿದೆ. ಮೂರು ಅಂತಸ್ತು ಮೀರಿ ಒಂದು ಸಣ್ಣ ಬಾತ್ ರೂಂ, ಸ್ಟೋರ್ ರೂಮ್ ಕಟ್ಟಿದರೂ ಅನುಮತಿ ಸಿಗುತ್ತಿಲ್ಲ. ಈ ರೀತಿಯ ಕಟ್ಟಡಗಳನ್ನು ಪರಿಗಣಿಸುವಂತೆ ಗುತ್ತಿಗೆದಾರರು ಒತ್ತಾಯ ಮಾಡ್ತಿದ್ದಾರೆ. ಸರಕಾರ 30x40 ಕಟ್ಟಡಗಳಿಗೆ ಒಸಿ ವಿನಾಯಿತಿ ನೀಡಿದ್ದು, ಇದರ ಜತೆಗೆ ಜಿ ಪ್ಲಸ್ ಟು ಅಥವಾ ಸ್ಟಿಲ್ಟ್ ಪ್ಲಸ್ ತ್ರೀ ಫ್ಲೋರ್ ಎನ್ನುವ ನಿಯಮವನ್ನು ಈಗಾಗಲೇ ಕಟ್ಟಿರುವ ಕಟ್ಟಡಗಳಿಗೆ ಸ್ವಲ್ಪ ಸಡಿಲಿಸಬೇಕು. ಇಲ್ಲಿದ್ದರೆ ಬಹಳಷ್ಟು ಸಮಸ್ಯೆಯಾಗಲಿದೆ ಎನ್ನುವುದು ಜನರ ಹಾಗೂ ಗುತ್ತಿಗೆದಾರರ ಅಳಲಾಗಿದೆ.

ಸಮಾಜ ಒಡೆಯುವ ಸನಾತನವಾದಿ ಆರ್‌ಎಸ್‌ಎಸ್‌ನ ವಿರೋಧಿ | ಕುರುಬ ಸಮುದಾಯ ಕಾರ್ಯಕ್ರಮದಲ್ಲಿ ಸಿಎಂ ವಾಗ್ದಾಳಿ

ಜಾತಿ ವ್ಯವಸ್ಥೆ, ಮೌಢ್ಯದ ವಿರುದ್ಧ ನನ್ನ ಹೋರಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾನು ಮೊದಲಿನಿಂದಲೂ ಸಮಾಜವನ್ನು ಒಡೆದು ಜಾತಿ ವ್ಯವಸ್ಥೆ ರೂಪಿಸುವ ಸನಾತನವಾದಿ ಆರ್‌ಎಸ್‌ಎಸ್ ವಿರೋಧಿಯಾಗಿದ್ದೇನೆ. ಈ ಕಾರಣಕ್ಕಾಗಿ ಶೋಷಿತ ಸಮುದಾಯಗಳ ಧ್ವನಿಯಾಗಿ ಕಾಗಿನೆಲೆ ಪೀಠ ಸ್ಥಾಪಿಸಿದ್ದೇನೆ. ಈ ಮೂಲಕ ಜಾತಿ ಪದ್ಧತಿ ಹಾಗೂ ಮೌಢ್ಯದ ವಿರುದ್ಧ ಇದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗಾಂಧಿನಗರದಲ್ಲಿ ಪ್ರದೇಶ ಕುರುಬರ ಸಂಘ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಸಂಘದ ಕಟ್ಟಡದಲ್ಲಿ ಕುರುಬ ಸಮಾಜದ ಮಕ್ಕಳಿಗೆ ಶಿಕ್ಷಣ, ಹಾಸ್ಟೆಲ್ ಬೇಕು ಎನ್ನುವುದು ನನ್ನ ಸ್ಪಷ್ಟ ಉದ್ದೇಶವಾಗಿತ್ತು. ಸಮಾಜವನ್ನು ಒಡೆದು ಜಾತಿ ವ್ಯವಸ್ಥೆ ರೂಪಿಸಿದ ಸಿದ್ಧಾಂತ ಆರ್‌ಎಸ್‌ಎಸ್‌ನದ್ದು. ಈ ಸಿದ್ಧಾಂತ ಶ್ರಮಿಕ ಜಾತಿ, ವರ್ಗಗಳ ವಿರೋಧಿ. ಅದಕ್ಕೇ ನಾನು ಆರ್‌ಎಸ್‌ಎಸ್ ಅನ್ನು ಮೊದಲಿನಿಂದಲೂ ವಿರೋಧಿಸುತ್ತೇನೆ. ಇದೇ ಕಾರಣಕ್ಕೆ ಕಾಗಿನೆಲೆ ಪೀಠ ಎಲ್ಲಾ ಶೋಷಿತ ಸಮುದಾಯಗಳ ಪೀಠ ಆಗಬೇಕೆಂದು ಪ್ರತಿಪಾದಿಸಿದ್ದೆ ಎಂದರು.

ನೂರು ವರ್ಷದ ಹಳೆ ಕಟ್ಟಡ ತೆರವುಗೊಳಿಸಿ ನೂತನ ಕಟ್ಟಡ ನಿರ್ಮಾಣ ಮಾಡಬೇಕು ಎಂದು ಪ್ರದೇಶ ಕುರುಬರ ಸಂಘದಿಂದ ಹಲವು ವರ್ಷಗಳಿಂದ ಬೇಡಿಕೆ ಇತ್ತು. ಈಗ ಎಲ್ಲರನ್ನೂ ಒಪ್ಪಿಸಿ ಹಳೆ ಕಟ್ಟಡ ನೆಲಸಮ ಮಾಡಿ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ಕೂಡ ಆಗಿದೆ. ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ, 18 ತಿಂಗಳಲ್ಲಿ ನೂತನ ಕಟ್ಟಡ ನಿರ್ಮಾಣವಾಗಲಿದೆ. ಹಳೆ ಕಟ್ಟಡದಲ್ಲಿದ್ದ ಹಾಸ್ಟೆಲ್‌ನಲ್ಲಿ ಓದಿದವರು ಒಳ್ಳೊಳ್ಳೆ ಅಧಿಕಾರಿಗಳಾಗಿದ್ದಾರೆ. ನ್ಯಾಯಾಧೀಶರೂ ಆಗಿದ್ದಾರೆ. ನಾನು 1983ರಲ್ಲಿ ಶಾಸಕನಾಗಿ 1984ರಲ್ಲಿ ಮಂತ್ರಿ ಆದೆ. ನಾನು ಸಾರಿಗೆ ಮಂತ್ರಿ ಆಗಿದ್ದಾಗ 1988ರಲ್ಲೇ ಕನಕದಾಸರ 500ನೇ ಜಯಂತ್ಯುವವನ್ನು ಆಚರಣೆ ಮಾಡಿಸಿದೆ. ಇದೇ ಸಂದರ್ಭದಲ್ಲಿ ಸಮಾಜಕ್ಕೊಂದು ಗುರುಪೀಠ ಬೇಕು ಎಂದು ತೀರ್ಮಾನಿಸಿದೆ. ಆಗ ಸಂಘದ ಕಟ್ಟಡದ ಮೇಲೆ 3 ಕೋಟಿ ರುಪಾಯಿ ಸಾಲ ಇತ್ತು. ಆ ಸಾಲದ ಸುಳಿಯಿಂದ ಸಂಘವನ್ನು ಬಿಡಿಸಿದ್ದು ನಾವು. ಇದು ಇತಿಹಾಸ. ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದರು.

600 ಕುರುಬ ಸಮುದಾಯ ಭವನ: ಸರಕಾರದಿಂದ 600 ಕುರುಬ ಸಮುದಾಯ ಭವನಗಳನ್ನು ಮಾಡಲು ಮುಂದಾಗಿದ್ದು, ಮೈಸೂರು, ಹುಬ್ಬಳ್ಳಿ, ಶಿವಮೊಗ್ಗ, ದಾವಣಗೆರೆ ಸೇರಿ ರಾಜ್ಯದ ಹತ್ತು ಹಲವು ಕಡೆಗಳಲ್ಲಿ ಸಂಘಕ್ಕೆ ಜಾಗ – ಕಟ್ಟಡ ಉಳಿಸಿಕೊಟ್ಟಿದ್ದೇನೆ. ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ ಮಾಡಿದ್ದು ನಾನೇ, ಸಂಗೊಳ್ಳಿ ಅಭಿವೃದ್ಧಿ ಪ್ರಾಧಿಕಾರ ಮಾಡಿದ್ದು ನಾನೇ. ಈಗ ನನಗೂ ಮುಕುಡಪ್ಪನಿಗೂ ಆಗುವುದಿಲ್ಲ. ಆದರೆ ಕುರುಬ ಸಮಾಜಕ್ಕೆ ಆಸ್ತಿ ಉಳಿಸಿ, ಬೆಳೆಸುವ ಕಾರ್ಯದಲ್ಲಿ ಮುಕುಡಪ್ಪ ಸೇರಿ ಶಿವಣ್ಣ, ಮಾಸ್ತಿ, ಸಿದ್ದಲಿಂಗಯ್ಯ, ನಾಗಣ್ಣ ರೀತಿಯ ಹಲವರು ಜತೆಗೆ ನಿಂತು ಸಹಕಾರ ಮಾಡಿದರು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಗಾಂಧಿನಗರದಲ್ಲಿ ಪ್ರದೇಶ ಕುರುಬರ ಸಂಘ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡಕ್ಕೆ ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು.

ಜೀವ ಬೆದರಿಕೆ ಬಂದಿದ್ದನ್ನ ನೆನಪಿಸಿಕೊಂಡ ಸಿಎಂ

ರೌಡಿ ಕೊತ್ವಾಲ್ ರಾಮಚಂದ್ರನ ಜತೆಯಿದ್ದ ಪುಟ್ಟಸ್ವಾಮಿಯಿಂದ ನನಗೆ ಜೀವ ಬೆದರಿಕೆ ಇತ್ತು. ನಾನು ಹೆದರಲಿಲ್ಲ. ಕುರುಬರ ಸಂಘದ ವಿಚಾರದಲ್ಲಿ ಭಾಗಿಯಾಗದಂತೆ ನನಗೆ ಬೆದರಿಕೆ ಇತ್ತು. ಆದರೂ ನಾನು ಹೆದರದೇ ಗ್ರಾಮೀಣ ಭಾಗದ ಸಂಘದ ನಿರ್ದೇಶಕರ ಬೆಂಬಲದಲ್ಲಿ ದಾವಣಗೆರೆಯ ಮಲ್ಲಪ್ಪ ಅವರನ್ನು ರೌಡಿ ಪುಟ್ಟಸ್ವಾಮಿ ವಿರುದ್ಧ ಸಂಘದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗೆ ನಿಲ್ಲಿಸಿದೆ. ಪುಟ್ಟಸ್ವಾಮಿ ನ್ಯಾಯಾಲಯಕ್ಕೆ ಹೋದರೂ ತೀರ್ಪು ನಮ್ಮ ಪರವಾಗಿ ಬಂತು. ಹೀಗೆ ಸಂಘವನ್ನು ನಾನು ಉಳಿಸಿದೆ ಎಂದು ಹೇಳಿದರು. ನನ್ನ ಹಳೇ ಕಾರಲ್ಲಿ ಇಡೀ ರಾಜ್ಯ ಸುತ್ತಿ ಸಮಾಜವನ್ನು ಸಂಘಟಿಸಿದೆ. ತಾರಾಕಾನಂದರನ್ನು ಪೀಠಾಧ್ಯಕ್ಷರನ್ನಾಗಿ ಮಾಡಲು ತೀರ್ಮಾನಿಸಿದ್ದು ನಾನೇ. ಮುಖ್ಯಮಂತ್ರಿ ಆಗಿದ್ದ ಬಂಗಾರಪ್ಪ ಅವರನ್ನು ಮತ್ತು ಕೇಂದ್ರ ಸಚಿವರಾಗಿದ್ದ ಶರದ್ ಪವಾರ್ ಅವರನ್ನು ಕರೆಸಿ ಪೀಠಕ್ಕೆ ಚಾಲನೆ ನೀಡಲಾಯಿತು. ಹೀಗೆ ಕುರುಬರ ಸಂಘ ಮತ್ತು ಕುರುಬ ಸಮಾಜದ ಪೀಠವನ್ನು ಉಳಿಸಿದ್ದು ನಾನು. ರಾಜ್ಯ ಸುತ್ತಿ ಸಮಾಜದ ಸಂಘಟಿಸಿದ್ದು ನಾನು, ಮುಕುಡಪ್ಪ, ಮಾಸ್ತಿ ಮತ್ತು ಇತರರು. ಆಮೇಲೆ ಎಚ್.ವಿಶ್ವನಾಥ್ ಅವರನ್ನು ಪೀಠದ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದು ನಾನು. ಈಗ ವಿಶ್ವನಾಥ್ ಬಾಯಿಗೆ ಬಂದಂತೆ ಮಾತಾಡುತ್ತಾರೆ. ಆದ್ದರಿಂದ ಇಡೀ ಸಮಾಜ ಈ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ನಾನು ಸಮಾಜಕ್ಕೆ ಏನು ಮಾಡಿದ್ದೇನೆ ಎನ್ನುವ ಚರಿತ್ರೆಯನ್ನು ಮನದಟ್ಟು ಮಾಡಿಕೊಳ್ಳಬೇಕು. ಗುರುಪೀಠ ನಾನು ಮಾಡಿದ್ದು ಎಂದು ನಿರಂಜನಾನಂದಪುರಿ ಸ್ವಾಮೀಜಿಗೆ ಹೆದರಿಸುವವರು ಇತಿಹಾಸ ತಿರುಚುತ್ತಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಮದ್ಯದಂಗಡಿ ಇ-ಹರಾಜು ಕೈಬಿಡಲು ಹೋಟೆಲ್ ಸಂಘ ಮನವಿ

ಬೆಂಗಳೂರು: 579 ಮದ್ಯದಂಗಡಿಗಳ ಇ-ಹರಾಜು ಪ್ರಕ್ರಿಯೆಯನ್ನು ಕೈಬಿಡುವಂತೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ್ ಅವರಿಗೆ ಬೆಂಗಳೂರು ಹೋಟೆಲುಗಳ ಸಂಘ ಮನವಿ ಮಾಡಿದೆ.

ಈಗಾಗಲೇ ನಮ್ಮ ರಾಜ್ಯದಲ್ಲಿ 13972 ಮದ್ಯದಂಗಡಿಗಳಿಗೆ ಪರವಾನಗಿ ನೀಡಲಾಗಿದೆ. ಈ ವೇಳೆ ಹೊಸತಾಗಿ 579 ಮದ್ಯದಂಗಡಿಗಳಿಗೆ ಇ-ಹರಾಜು ಮುಖಾಂತರ ಅಂದಾಜು 1500 ಕೋಟಿ ಸಂಪನ್ಮೂಲ ಕ್ರೋಢೀಕರಿಸುವ ಉದ್ದೇಶದಿಂದ ಸರಕಾರ ಇ-ಹರಾಜು ಪ್ರಕ್ರಿಯೆ ನಡೆಸಲು ಮುಂದಾಗಿರುವುದು ಅಸಮಂಜಸವಾಗಿದೆ ಎಂದು ಹೇಳಿದೆ. ಮದ್ಯದ ಮೇಲೆ ಹಾಕಿರುವ ಹೆಚ್ಚುವರಿ ತೆರಿಗೆಗಳಿಂದ ವ್ಯಾಪಾರ ಕುಂಠಿತವಾಗಿರುತ್ತದೆ. ಇದರ ಜತೆಗೆ ಈ ಬಾರಿ ಅಂದಾಜು 5 ಲಕ್ಷದಷ್ಟು ಭಕಾರ ಶುಲ್ಕವನ್ನು ಹೆಚ್ಚಿಸಲಾಗಿದೆ (ಶೇ.50ರಷ್ಟು). ಇದಲ್ಲದೆ ರಾಜ್ಯ ಸರಕಾರಕ್ಕೆ ವಾರ್ಷಿಕವಾಗಿ ಅಂದಾಜು 40 ಸಾವಿರ ಕೋಟಿಯಷ್ಟು ಅಬಕಾರಿ ತೆರಿಗೆ ಆದಾಯ ಕೂಡ ದೊರಕಿಸುತ್ತಿದ್ದೇವೆ. ಹೀಗಿದ್ದರೂ ಇ-ಹರಾಜು ಮೂಲಕ ಪರವಾನಗಿಗಳನ್ನು ನೀಡುವ ಕ್ರಮವು ಉದ್ಯಮದ ಅಳಿವು-ಉಳಿವಿನ ಸಮಸ್ಯೆಯನ್ನು ಉಂಟುಮಾಡಲಿದೆ. ಈ ಎಲ್ಲ ಕಾರಣದಿಂದ ಈಗಿರುವ ಮದ್ಯದಂಗಡಿಗಳಿಗೆ ಆರ್ಥಿಕ ಹೊಡೆತವಾಗದಿರಲು ತಕ್ಷಣ ಇ-ಹರಾಜು ಪ್ರಕ್ರಿಯೆಯನ್ನು ಕೈಬಿಡಬೇಕು ಮತ್ತು ಪರವಾನಗಿ ಪಡೆದಿರುವ ಮದ್ಯದಂಗಡಿಗಳ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ಹೋಟೆಲ್ ಸಂಘ ಸರಕಾರವನ್ನು ಒತ್ತಾಯಿಸಿದೆ.

ಜಯನಗರದ ನ್ಯಾಷನಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಎರಡು ದಿನಗಳ ಸಾಂಸ್ಕೃತಿಕ ಮತ್ತು ಸಿನರ್ಜಿಯಾ ಉತ್ಸವ ಅರ್ಣವಕ್ಕೆ ತೆರೆ ಬಿದ್ದಿದೆ. ವಿವಿಧ ಸ್ಪರ್ಧೆಯಲ್ಲಿ ಗೆಲುವು ಸಾಧಿಸಿದ ಸ್ಪರ್ಧಿಗಳಿಗೆ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ ಗೌರವ ಕಾರ್ಯದರ್ಶಿ ವಿ.ವೆಂಕಟಶಿವಾರೆಡ್ಡಿ, ಜಂಟಿ ಕಾರ್ಯದರ್ಶಿ ಸುಧಾಕರ್ ಇಸ್ತೂರಿ, ಅಧ್ಯಕ್ಷ ಡಾ.ಪಿ.ಎಲ್. ವೆಂಕಟರಾಮ ರೆಡ್ಡಿ ಪ್ರಶಸ್ತಿ ನೀಡಿದರು. ಈ ವೇಳೆ ಕಾರ್ಯಸಮಿತಿ ಅಧ್ಯಕ್ಷ ಜೆ.ಎಂ. ರವೀಂದ್ರ, ಪ್ರಾಂಶುಪಾಲ ಡಾ.ಡಿ.ಜಯದೇವಪ್ಪ, ಪ್ರೊ.ಎಸ್.ಮಮತ, ಸಾಂಸ್ಕೃತಿಕ ಸಮನ್ವಯಾಧಿಕಾರಿ ಡಾ.ವಿ.ಸವಿತ, ಕಾಲೇಜು ಪರಿಷತ್ತಿನ ಕಾರ್ಯದರ್ಶಿ ಪ್ರೊ.ಎಸ್. ಚಲುವಪ್ಪ, ಪ್ರಾಂಶುಪಾಲೆ ಡಾ.ಸಿ.ವಿಜಯಲಕ್ಷ್ಮಿ ಇದ್ದರು.

ಗೋವಾದಲ್ಲಿರುವ ಶ್ರೀ ಸಂಸ್ಥಾನ ಗೋಕರ್ಣ ಪರ್ತಾಗಳಿ ಜೀವೋತ್ತಮ ಮಠದ ವತಿಯಿಂದ ಸಿದ್ಧವಾಗಿರುವ 77 ಅಡಿ ಎತ್ತರದ ಶ್ರೀರಾಮ ಮೂರ್ತಿಯನ್ನು ನ.28ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದು, ಈ ಕಾರ್ಯಕ್ರಮದ ಪೋಸ್ಟರ್ ಅನ್ನು ಬುಧವಾರ ಅನಾವರಣಗೊಳಿಸಲಾಯಿತು. ಈ ವೇಳೆ ಮಠದ ಅಧ್ಯಕ್ಷ ಅಮರನಾಥ ಕಾಮತ್, ಪ್ರದೀಪ್ ಜಿ.ಪೈ, ಅಣ್ಣಪ್ಪ ಕಾಮತ್ ಇದ್ದರು.

ದಿ.ಅನಂತಕುಮಾರ ಪುಣ್ಯಸ್ಮರಣೆಯ ಅಂಗವಾಗಿ ಅನಂತಕುಮಾರ ಪ್ರತಿಷ್ಠಾನದ ವತಿಯಿಂದ ಪಂಜಿನ ಮೆರವಣಿಗೆಯನ್ನು ಬುಧವಾರ ಸೌಥ್‌ಎಂಡ್ ವೃತ್ತದಿಂದ ನ್ಯಾಷನಲ್ ಕಾಲೇಜು ಮೈದಾನದವರೆಗೆ ನಡೆಯಿತು. ಈ ವೇಳೆ ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ಶಾಸಕರಾದ ಸಿ.ಕೆ.ರಾಮಮೂರ್ತಿ, ಉದಯ ಗರುಡಾಚಾರ್, ಅದಮ್ಯ ಚೇತನ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಿವೃತ್ತ ಇನ್‌ಸ್ಪೆಕ್ಟರ್ ವಶಕ್ಕೆ

ಬೆಂಗಳೂರು: ಆಸ್ತಿ ಹಂಚಿಕೆ ವಿಚಾರಕ್ಕೆ ತಂಗಿಯ ಮಗನ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ ಆರೋಪದಡಿ ನಿವೃತ್ತ ಇನ್‌ಸ್ಪೆಕ್ಟರ್ ಜಯಣ್ಣ ಮತ್ತು ಅವರ ಮಗ ವಿಶ್ವಾಸ್‌ನನ್ನು ವಶಕ್ಕೆ ಪಡೆದಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಮಾದನಾಯಕನಹಳ್ಳಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆಸ್ತಿ ಹಂಚಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಸಂಬಂಧಿಗಳ ನಡುವೆ ಹಲವು ದಿನಗಳಿಂದ ಕಲಹ ಇತ್ತು. ಬುಧವಾರ ಬೆಳಗ್ಗೆ ಇದೇ ವಿಚಾರಕ್ಕೆ ಗಲಾಟೆ ನಡೆದು 35 ವರ್ಷದ ವಿವೇಕ್ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಲಾಗಿದೆ.

ಕಸದ ಬ್ಲ್ಯಾಕ್ ಸ್ಪಾಟ್ ತೆರವು ಮಾಡಿಸಲು ರಾಜೇಂದ್ರ ಚೋಳನ್ ಸೂಚನೆ

ಪ್ರಮುಖ ರಸ್ತೆಗಳು ಗುಂಡಿ ಮುಕ್ತವಾಗಲಿ

ಬೆಂಗಳೂರು: ವಿಧಾನಸಭಾ ಕ್ಷೇತ್ರವಾರು ಪ್ರಮುಖ ರಸ್ತೆಗಳನ್ನು ಆಯ್ಕೆ ಮಾಡಿ ಗುಂಡಿ ಮುಕ್ತ ಬ್ಲ್ಯಾಕ್ ಸ್ಪಾಟ್ ಮುಕ್ತ ರಸ್ತೆಗಳನ್ನಾಗಿಸಿ ವರದಿ ನೀಡಿನ ಎಂದು ಅಧಿಕಾರಿಗಳಿಗೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಸೂಚನೆ ನೀಡಿದರು.

ಕೇಂದ್ರ ನಗರ ಪಾಲಿಕೆಯ ಕಾಮಗಾರಿ ವಿಭಾಗದ ಹಾಗೂ ಘನತ್ಯಾಜ್ಯ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿ, ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಆದ್ಯತೆಯ ಮೇಲೆ ಪ್ರಮುಖ ರಸ್ತೆಗಳನ್ನು ಆಯ್ಕೆ ಮಾಡಿಕೊಂಡು ಗುಂಡಿ ಮುಕ್ತ ರಸ್ತೆಗಳನ್ನಾಗಿಸಲು ಹಾಗೂ ಬ್ಲ್ಯಾಕ್ ಸ್ಪಾಟ್ ಮುಕ್ತ ರಸ್ತೆಗಳನ್ನಾಗಿಸಲು ಕಾರ್ಯಪ್ರವೃತ್ತರಾಗಲು ಹಾಗೂ ಪ್ರತಿ ವಾರ ಈ ಬಗ್ಗೆ ಕೈಗೊಂಡ ಕ್ರಮದ ವರದಿ ನೀಡಿ ಎಂದು ಸೂಚನೆ ನೀಡಿದರು.

ವಿಧಾನಸಭಾ ಕ್ಷೇತ್ರವಾರು ಸಾಮೂಹಿಕ ಸ್ವಚ್ಛತೆ ಕೈಗೊಳ್ಳಲು ಆಯ್ಕೆ ಮಾಡುವ ಪ್ರತಿ ರಸ್ತೆಯಲ್ಲಿಯೂ ಬ್ಲ್ಯಾಕ್ ಸ್ಪಾಟ್‌ಗಳ ತೆರವು ಹಾಗೂ ಪುನಃ ಬ್ಲ್ಯಾಕ್ ಸ್ಪಾಟ್ ಆಗದಂತೆ ಕ್ರಮವಹಿಸುವುದು, ಗೋಡೆಗಳಿಗೆ ಬಣ್ಣ ಹಾಕಿ ಸುಂದರೀಕರಣಗೊಳಿಸುವುದು, ಬ್ಲ್ಯಾಕ್ ಸ್ಪಾಟ್ ಸ್ಥಳಗಳಲ್ಲಿ ಸಸಿಗಳ ಕುಂಡಗಳನ್ನು ಇಡುವುದು, ಒಣಗಿದ ಮರ, ರೆಂಬೆ ಕೊಂಬೆಗಳ ತೆರವುಗೊಳಿಸುವುದು, ವಿದ್ಯುತ್ ದೀಪಗಳನ್ನು ಅಳವಡಿಸುವುದು, ಪಾದಚಾರಿ ಒತ್ತುವರಿ ತೆರವುಗೊಳಿಸುವುದು, ಪಾದಚಾರಿ ಮಾರ್ಗ ದುರಸ್ಥಿಗೊಳಿಸುವುದು, ಸಸಿಗಳನ್ನು ನೆಡುವುದು, ಸೇರಿದಂತೆ ಆಯ್ಕೆ ಮಾಡಿದ ಮಾರ್ಗದ ಸಮಗ್ರ ಅಭಿವೃದ್ಧಿಗೊಳಿಸಿ ಪಾದಚಾರಿ ಸ್ನೇಹಿ ಮಾರ್ಗ ಹಾಗೂ ಸುಗಮ ಸಂಚಾರಿ ಮಾರ್ಗಗಳನ್ನಾಗಿಸಲು ಎಲ್ಲಾ ವಿಭಾಗಗಳ ಅಧಿಕಾರಿಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಲು ಹಾಗೂ ಸ್ವಚ್ಛತಾ ಕಾರ್ಯಕ್ಕೆ ಸ್ಥಳೀಯ ನಿವಾಸಿ ಸಂಘದವರು, ಸಂಘ ಸಂಸ್ಥೆಯವರನ್ನು ಆಹ್ವಾನಿಸಲು ಹಾಗೂ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿಕೊಂಡು ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲು ಸೂಚನೆ ನೀಡಿದರು.

ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಘನತ್ಯಾಜ್ಯ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

> ರಸ್ತೆ ಬದಿ ತ್ಯಾಜ್ಯ ಹಾಕುವುದು ಬ್ಲ್ಯಾಕ್ ಸ್ಪಾಟ್‌ಗಳ ಸಮಸ್ಯೆ ಪ್ರಮುಖ ಸಮಸ್ಯೆಯಾಗಿದ್ದು, ಇದರಿಂದ ನಗರದ ನೈರ್ಮಲ್ಯ, ಸುಂದರೀಕರಣ, ಜನರ ಆರೋಗ್ಯದ ಮೇಲೆ ಪರಿಣಾಮ ಬೀರಲಿದ್ದು, ನೈರ್ಮಲ್ಯ ಕಾಪಾಡಲು ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಲು ಮತ್ತು ಹಾಗೂ ರಸ್ತೆಗೆ ತ್ಯಾಜ್ಯ ಹಾಕುವವರಿಗೆ ದಂಡ ವಿಧಿಸಿ.
> – ದಲ್ಜಿತ್ ಕುಮಾರ್, ಅಪರ ಆಯುಕ್ತ

10 ಕೋಟಿ ಮೌಲ್ಯದ ರಸ್ತೆ ಒತ್ತುವರಿ ತೆರವು

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಉತ್ತರಹಳ್ಳಿ ಉಪವಿಭಾಗ ಅರೇಹಳ್ಳಿ ಗ್ರಾಮ, ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆಯ 6000 ಚದರ ಅಡಿ ಜಾಗದಲ್ಲಿ ಅನಧಿಕೃತವಾಗಿ ಶೆಡ್ ನಿರ್ಮಿಸಿದ್ದರಿಂದ ರಸ್ತೆ ಒತ್ತುವರಿಯಾಗಿದೆ ಎಂದು ಸಾರ್ವಜನಿಕರು ಕರ್ನಾಟಕ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು.

ದೂರಿನನ್ವಯ ಲೋಕಾಯುಕ್ತರು ಒತ್ತುವರಿ ತೆರವುಗೊಳಿಸಲು ನೀಡಿರುವ ಸೂಚನೆ ಮೇರೆಗೆ ಬೆಂಗಳೂರು ದಕ್ಷಿಣ ನಗರ ಪಾಲಿಕೆ ವತಿಯಿಂದ ಬುಧವಾರ ತೆರವು ಕಾರ್ಯಾಚರಣೆ ಕೈಗೊಂಡು, ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ್ದ ಅನಧಿಕೃತ ಶೆಡ್ ತೆರವುಗೊಳಿಸಿ ಸಾರ್ವಜನಿಕರಿಗೆ ರಸ್ತೆ ಉಪಯೋಗಿಸಲು ಅನುಕೂಲ ಮಾಡಿಕೊಡಲಾಗಿದ್ದು , 6,000 ಚದರ ಅಡಿ 10. 00 ಕೋಟಿ ಮೌಲ್ಯದ ಜಾಗವನ್ನು ಪಾಲಿಕೆ ವತಿಯಿಂದ ವಶಪಡಿಸಿಕೊಳ್ಳಲಾಗಿದೆ. ರಸ್ತೆ ಒತ್ತುವರಿದಾರರ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು. ಈ ಕಾರ್ಯಾಚರಣೆ ವೇಳೆ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರು ಇದ್ದರು.

ಉತ್ತರಹಳ್ಳಿ ಉಪವಿಭಾಗ ಅರೇಹಳ್ಳಿ ಗ್ರಾಮ, ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಯ ರಸ್ತೆಯಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಿತು.

ಪ್ರತಿದಿನ ಎರಡು ಫ್ಲೈಬಸ್ ಸಂಚಾರ | ಬಸ್ ಸೇವೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ | ಶೌಚಾಲಯ ಸೇರಿ ಹಲವು ಆಧುನಿಕ ಸೌಲಭ್ಯ

ದೇವನಹಳ್ಳಿ ಏರ್‌ಪೋರ್ಟ್‌ನಿಂದ ದಾವಣಗೆರೆಗೆ ಫ್ಲೈಬಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದಾವಣಗೆರೆಗೆ ನೇರ ಸಂಚಾರಕ್ಕಾಗಿ ಕೆಎಸ್ಆರ್‌ಟಿಸಿ ನೂತನ ಫ್ಲೈಬಸ್‌ನ ಸೇವೆಗೆ ಸಾರಿಗೆ ಟಿ-2ನಲ್ಲಿ ಸಚಿವ ರಾಮಲಿಂಗಾ ರೆಡ್ಡಿ ಬುಧವಾರ ಚಾಲನೆ ನೀಡಿದರು.

ನೂತನ ಬಸ್ ಸೇವೆಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ, ಈ ಹಿಂದೆ ನಾನು ಸಚಿವನಾಗಿದ್ದಾಗ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬೆಂಗಳೂರಿಂದ ಮೈಸೂರಿಗೆ 2013ರಲ್ಲಿ ಫ್ಲೈಬಸ್ ವ್ಯವಸ್ಥೆಯು ಪ್ರಾರಂಭಿಸಲಾಗಿತ್ತು. ಕೆಲವು ದಿನಗಳ ಬಳಿಕ ಅದನ್ನು ಮಡಿಕೇರಿ, ಕುಂದಾಪುರಕ್ಕೆ ಫ್ಲೈ ಬಸ್ ಸೇವೆಯನ್ನು ವಿಸ್ತರಿಸಲಾಯಿತು. ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಬಳಕೆ ಮಾಡಲು ಉತ್ತೇಜಿಸುವುದು ನಮ್ಮ ಪ್ರಥಮ ಆದ್ಯತೆ ಆಗಿರಬೇಕು. ಆ ನಿಟ್ಟಿನಲ್ಲಿ ಬೆಂಗಳೂರು-ದಾವಣಗೆರೆ ನಡುವೆ ನೇರ ಫ್ಲೈಬಸ್ ಸೇವೆ ಆರಂಭಿಸಲಾಗಿದೆ ಎಂದರು.

ಪ್ರತಿದಿನ 2 ಫ್ಲೈಬಸ್‌ಗಳು ಸಂಚಾರ: ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದಾವಣಗೆರೆಗೆ ಪ್ರತಿದಿನ ಎರಡು ಫ್ಲೈಬಸ್‌ಗಳು ಸಂಚರಿಸಲಿದ್ದು, ಈ ಬಸ್‌ಗಳು ತುಮಕೂರು ಮತ್ತು ಚಿತ್ರದುರ್ಗ ಬೈಪಾಸ್ ಮಾರ್ಗವಾಗಿ ಪ್ರಯಾಣಿಸಲಿವೆ. ಏರ್‌ಪೋರ್ಟ್‌ಗೆ ಬರುವ ಮತ್ತು ಏರ್‌ಪೋರ್ಟ್‌ನಿಂದ ತೆರಳುವ ಪ್ರಯಾಣಿಕರ ಅನುಕೂಲಕ್ಕಾಗಿ ಈ ನೂತನ ಫ್ಲೈಬಸ್ ಸೇವೆ ಆರಂಭಿಸಲಾಗಿದೆ. ಈ ಬಸ್‌ಗಳಲ್ಲಿ ಶೌಚಾಲಯ ಸೇರಿದಂತೆ ಅತ್ಯಾಧುನಿಕ ಸೌಲಭ್ಯಗಳನ್ನೂ ಒದಗಿಸಲಾಗಿದೆ. ಇಲ್ಲಿಯವರೆಗೆ ಮೈಸೂರು, ಮಡಿಕೇರಿ, ಕುಂದಾಪುರ ಸೇರಿದಂತೆ ಕೆಲವು ನಗರಗಳಿಗೆ ಮಾತ್ರ ಫ್ಲೈಬಸ್ ಸೇವೆ ಲಭ್ಯವಿತ್ತು. ಈಗಿನಿಂದ ಹೆಚ್ಚುವರಿಯಾಗಿ ದಾವಣಗೆರೆಯತ್ತವೂ ನೇರ ಸಂಪರ್ಕ ಸಿಗಲಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ವೇಳಾಪಟ್ಟಿ, ಸಂಚಾರ ಸಮಯ

ಹಿನ್ನೆಲೆ: ದಕ್ಷಿಣ ಕಾಶ್ಮೀರದ ಖಾಜಿಗುಂಡ್ ನಿವಾಸಿಯಾಗಿರುವ ಆದಿಲ್ ಅಹ್ಮದ್ ರಾಥರ್ 2024ರ ಅಕ್ಟೋಬರ್‌ವರೆಗೆ ಅನಂತನಾಗ್ ನಲ್ಲಿರುವ ಸರಕಾರಿ ವೈದ್ಯ ಕಾಲೇಜಿನಲ್ಲಿ ಹಿರಿಯ ರೆಸಿಡೆಂಟ್ ಡಾಕ್ಟರ್ ಆಗಿದ್ದ. ಬಳಿಕ 2025ರ ಮಾರ್ಚ್‌ನಲ್ಲಿ ಉತ್ತರ ಪ್ರದೇಶದ ಸಹರಾನ್ ಪುರಕ್ಕೆ ತೆರಳಿದ್ದ. ಮೊದಲು ವಿ-ಬ್ರಾಸ್ ಆಸ್ಪತ್ರೆಗೆ ಸೇರಿದ ನಂತರ ಪ್ರಸಿದ್ಧ ಮೆಡಿಕೇರ್ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದ. ಪೊಲೀಸ್ ದಾಖಲೆಗಳ ಪ್ರಕಾರ ಈತನಿಗೆ ಈ ಕೆಲಸದಲ್ಲಿ ತಿಂಗಳಿಗೆ 5 ಲಕ್ಷ ರೂ. ಸಂಬಳ ಸಿಗುತ್ತಿತ್ತು. ಅಷ್ಟೇ ಅಲ್ಲದೇ ವಸತಿಗಾಗಿ 10 ಸಾವಿರ ರೂ. ಭತ್ಯೆ ಪ್ರತ್ಯೇಕವಾಗಿ ಸಿಗುತ್ತಿತ್ತು. ಬಾಪು ಬಿಹಾರ ಕಾಲೋನಿಯಲ್ಲಿ ಎರಡು ಕೊಠಡಿಗಳ ಮನೆಯಲ್ಲಿ ವಾಸವಿದ್ದ ಆದಿಲ್ ತಡರಾತ್ರಿ ಭೇಟಿ ನೀಡುವವರನ್ನು ಹೊರತು ಪಡಿಸಿ ನೆರೆಮನೆಯವರ ಜತೆ ಮಾತನಾ ಡುತ್ತಿರಲಿಲ್ಲ ಎನ್ನಲಾಗಿದೆ. ಸೆ.26ರಂದು ರಜೆ ಪಡೆದ ಆದಿಲ್ ಅ.4ರಂದು ಜಮ್ಮುವಿನ ವೈದ್ಯೆಯನ್ನು ಮದುವೆಯಾಗಿ ಸಹರಾನ್‌ಪುರಕ್ಕೆ ಮರಳಿದ್ದ.

ರೋಗಿ ಸಾವು ಕಾರಣಕ್ಕೆ ವಜಾಗೊಂಡಿದ್ದ ಉಮರ್



ದೆಹಲಿ: ದೆಹಲಿ ಕೆಂಪು ಕೋಟೆ ಬಳಿ ಐ 20 ಕಾರು ಸ್ಫೋಟಿಸಿದ ಪ್ರಮುಖ ಆರೋಪಿ ಡಾ.ಉಮರ್ ನಬಿ ಶ್ರೀನಗರದಲ್ಲಿ ಎಂಬಿಬಿಎಸ್ ಮತ್ತು ಎಂಡಿ ವ್ಯಾಸಂಗ ಮಾಡಿದ್ದ.

2023ರಲ್ಲಿ ಕಾಶ್ಮೀರದ ಅನಂತನಾಗ್ ಸರಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ್ದ. ಆದರೆ ನಿರ್ಲಕ್ಷ್ಯದ ಕಾರಣ ಒಂದು ಜೀವದ ಸಾವಿಗೆ ಕಾರಣವಾಗಿದ್ದ. ಆಗ ಕೆಲಸ ಕಳೆದುಕೊಂಡ. ಬಳಿ ಹರಿಯಾಣ ರಾಜ್ಯದ ಫರಿದಾಬಾದ್‌ನ ಧವೂಜ್ ಗ್ರಾಮದಲ್ಲಿನ ಅಲ್-ಪಲಾಹ್ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡ. ಅಲ್ಲಿದ್ದಾಗಲೇ ಡಾ.ಮುಜಮ್ಮಿಲ್, ಡಾ.ಆದಿಲ್, ಡಾ.ಶಾಹೀನ್‌ರನ್ನು ಸೇರಿಸಿಕೊಂಡು ದೊಡ್ಡ ಮಟ್ಟದಲ್ಲಿ ಭಯೋತ್ಪಾದಕ ದಾಳಿಗೆ ಸಂಚು ಹೂಡಿದ್ದ.

ಸಹ ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿ, ರೋಗಿಗಳು ಕೂಡ ಉಮರ್‌ನ ಅಸಭ್ಯ ವರ್ತನೆ ಹಾಗೂ ಅಜಾಗರೂಕ ಕೆಲಸ ವೈಖರಿ ಬಗ್ಗೆ ದೂರು ನೀಡಿದ್ದರು.ಉಮರ್ ಕೂಡ ಹೆಚ್ಚಿನ ಸಮಯ ಕೆಲಸಕ್ಕೆ ಗೈರಾಗಿರುತ್ತಿದ್ದ ಎಂದು ತನಿಖೆಯಿಂದ ತಿಳಿದುಬಂದಿದೆ.

ಉದ್ಘಾಟನೆ ಬೆನ್ನಿಗೇ ಕುಸಿದ ಚೀನಾ ಸೇತುವೆ

ಬೀಜಿಂಗ್: ಚೀನಾದಲ್ಲಿ ಇತ್ತೀಚೆಗಷ್ಟೇ ಉದ್ಘಾಟನೆಯಾಗಿದ್ದ ಬೃಹತ್ ಸೇತುವೆಯೊಂದು ಭೂಕುಸಿತದ ಕಾರಣದಿಂದಾಗಿ ಕುಸಿದುಬಿದ್ದಿದೆ.ನೈರುತ್ಯ ಚೀನಾದ ಸಿಚುವಾನ್ ಪ್ರಾಂತ್ಯದಲ್ಲಿ ಹಾಂಗ್‌ಕಿ ಸೇತುವೆ ಇತ್ತೀಚೆಗಷ್ಟೇ ಲೋಕಾರ್ಪಣೆಗೊಂಡಿತ್ತು. ಇದೀಗ ಕುಸಿದು ಬಿದ್ದಿದೆ. ಸೇತುವೆ ಕುಸಿಯುತ್ತಿರುವ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ.

ಈ ಸೇತುವೆಯು ಚೀನಾದ ಹೃದಯಭಾಗದ ನಗರಗಳನ್ನು ಟಿಬೆಟ್‌ಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯ ಭಾಗವಾಗಿತ್ತು. ಮಂಗಳವಾರ ಮಧ್ಯಾಹ್ನ ಭೂಕುಸಿತವಾದಾಗ ಸೇತುವೆ ಕುಸಿದಿದೆ. ಘಟನೆಯಲ್ಲಿ ಯಾವುದೇ ಸಾವುನೋವು ವರದಿಯಾಗಿಲ್ಲ.

ಸಿಚುವಾನ್ ರಸ್ತೆ ಸಂಪರ್ಕಿಸುವ ಈ ಹಾಂಗ್ಕಿ ಸೇತುವೆಯನ್ನು ವರ್ಷಾರಂಭದಲ್ಲಿ ಪೂರ್ಣಗೊಳಿಸಲಾಗಿತ್ತು. ಇತ್ತೀಚೆಗಷ್ಟೇ ಸಂಚಾರಕ್ಕೆ ಮುಕ್ತಗೊಳಿಸಲಾಗಿತ್ತು.

ಗೆಲುವಿಗೆ ಮುನ್ನವೇ ಲಡ್ಡುಗೆ ಆರ್ಡರ್!

ಪಟನಾ: ಭಾರತೀಯ ಜನತಾ ಪಕ್ಷ(ಬಿಜೆಪಿ) ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ನಿರೀಕ್ಷೆಯಲ್ಲಿದೆ. ಚುನಾವಣೋತ್ತರ ಸಮೀಕ್ಷೆಗಳೂ ಎನ್‌ಡಿಎ ಮೈತ್ರಿಕೂಟದ ಭಾರೀ ಗೆಲುವಿನ ಸಾಧ್ಯತೆಯನ್ನು ಎತ್ತಿ ತೋರಿವೆ. ಶುಕ್ರವಾರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ. ಅದಕ್ಕೂ ಮುನ್ನವೇ ಬಿಜೆಪಿ ನಾಯಕರು ಒಟ್ಟು 501 ಕೆಜಿ ಲಡ್ಡು ಸಿಹಿ ಸಿದ್ಧಪಡಿಸುವುದಕ್ಕೆ ಆರ್ಡರ್ ಮಾಡಿದ್ದಾರೆ ಎಂದು ವರದಿಯಾಗಿದೆ.

1951ರ ನಂತರದಲ್ಲಿ ಬಿಹಾರದಲ್ಲಿ

ಅತ್ಯಧಿಕ ಅಂದರೆ (2 ಹಂತಗಳ ಸರಾಸರಿ) ಶೇ. 66.91ರಷ್ಟು ಮತದಾನವಾಗಿದೆ. ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಎನ್‌ಡಿಎ ಸರಕಾರಕ್ಕೆ ಸ್ಪಷ್ಟ ಜನಾದೇಶ ಸಿಗಲಿದೆ ಎಂದು ಹೇಳಿವೆ. ಇದರಿಂದ ಉತ್ತೇಜಿತವಾಗಿರುವ ಕೇಸರಿ ಪಕ್ಷವು ಸಂಭ್ರಮಾಚರಣೆಗೆ ಸಿದ್ಧತೆ ಮಾಡಿಕೊಂಡಿದೆ. ಮತ ಎಣಿಕೆ ದಿನ ಹೋಳಿ, ದಸರಾ, ದೀಪಾವಳಿ ಆಚರಿಸಲಿದ್ದೇವೆ. ಬಿಹಾರ ಜನರು ಎನ್‌ಡಿಎ ಅಭಿವೃದ್ಧಿ ಕಾರ್ಯಗಳ ಪರವಾಗಿ ಮತ ಚಲಾಯಿಸಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತ ಕೃಷ್ಣ ಕುಮಾರ್ ಕಲ್ಲು ಸಂಭ್ರಮದಿಂದ ಹೇಳಿಕೊಂಡಿದ್ದಾರೆ. ಫಲಿತಾಂಶದ ದಿನ ಜನರಿಗೆ ವಿತರಿಸಲು ಪಕ್ಷದಿಂದಲೇ 501 ಕೆಜಿ ಲಡ್ಡು ಸಿಹಿಗೆ ಆರ್ಡರ್ ಮಾಡಲಾಗಿದೆ ಎಂದೂ ಅವರು ಹೇಳಿದ್ದಾರೆ.

ತ.ನಾಡಲ್ಲಿ ಎಸ್‌ಐಆರ್ ಅತ್ಯಗತ್ಯ: ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಪಾದನೆ

ಸಿಎಂ ಸ್ಟಾಲಿನ್ ಕ್ಷೇತ್ರದಲ್ಲೇ 4 ಸಾವಿರ ನಕಲಿ ಮತದಾರರು!

ಕೊಯಮತ್ತೂರು: ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪ್ರತಿನಿಧಿಸುವ ಕೊಳತ್ತೂರು



ವಿಧಾನಸಭಾ ಕ್ಷೇತ್ರದಲ್ಲೇ 4,379 ನಕಲಿ ಮತದಾರರನ್ನು ಗುರುತಿಸಲಾಗಿದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮ ಲಾ ಸೀತಾರಾಮನ್ ಬುಧವಾರ ನೇರ ಆರೋಪ ಮಾಡಿದ್ದಾರೆ.

ಹಾಗಾಗಿಯೇ ರಾಜ್ಯದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರ ಣೆ'(ಎಸ್‌ಐಆರ್) ನಡೆಸಲಾಗುತ್ತಿದೆ ಎಂದಿದ್ದಾರೆ. ದೊಡ್ಡ ಸಂಖ್ಯೆಯ ನಕಲಿ ಮತದಾರರನ್ನು ಬಳಸಿ ಕೊಂಡೇ ಸ್ಟಾಲಿನ್ ಕೊಳ ತ್ತೂರು ಕ್ಷೇತ್ರದಲ್ಲಿ ಚುನಾವಣೆ ಗೆಲ್ಲುತ್ತಿದ್ದಾರೆ ಎಂದು ಹೇಳಿಕೊಳ್ಳ ಬಹುದಾಗಿದೆ. ಈ ನಕಲಿ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆಯಬೇಕಲ್ಲವೇ? ಎಂದೂ ಸಚಿವೆ ಪ್ರಶ್ನೆ ಮಾಡಿದ್ದಾರೆ. ಕೊಳತ್ತೂರು ಕ್ಷೇತ್ರದ ಬೂತ್ ಸಂಖ್ಯೆ 157ರಲ್ಲಿ ರಫೀವುಲ್ಲಾ ಎಂಬವನ ಹೆಸರು 3 ಸ್ಥಳಗಳಲ್ಲಿ 3 ಭಿನ್ನ ಎಪಿಕ್ ಸಂಖ್ಯೆಗಳಲ್ಲಿದೆ. ಇದೇ ರೀತಿ ಈ ಕ್ಷೇತ್ರದಲ್ಲೇ ನಕಲಿ ವಿಳಾಸ ನೀಡಿರುವ 9,133 ಮತದಾರರಿದ್ದಾರೆ ಎಂದರು.

ಬೂತ್ ಸಂಖ್ಯೆ 84ರ ಮನೆ ಸಂಖ್ಯೆ 11ರಲ್ಲೇ 30 ಮತದಾರರಿದ್ದಾರೆ. ವಿವಿಧ ಧರ್ಮ-ಜಾತಿಗೆ ಸೇರಿದ 62 ನಕಲಿ ಮತದಾರರು ಬೂತ್ ಸಂಖ್ಯೆ 187ರ ಮನೆ ಸಂಖ್ಯೆ 20ರಲ್ಲಿದ್ದಾರೆ.

ಬೂತ್ ಸಂಖ್ಯೆ 140ರ ಮನೆ ಸಂಖ್ಯೆ 10ರಲ್ಲಿ ಒಂದೇ ಮನೆಯಲ್ಲಿ ವಿವಿಧ ಧರ್ಮಗಳ 80 ಮತದಾರರ ಹೆಸರಿದೆ.

ಪರಸ್ಪರ ಸಂಬಂಧವೇ ಇಲ್ಲದ ಮಿಶ್ರ ಕುಟುಂಬಗಳ ಒಟ್ಟಾರೆ 5,964 ಮತದಾರರು ಕೊಳತ್ತೂರು ಕ್ಷೇತ್ರದಲ್ಲಿ ಒಂದೇ ವಿಳಾಸದಲ್ಲಿದ್ದಾರೆ. ಒಂದು ಕ್ಷೇತ್ರದಲ್ಲೇ ಇಷ್ಟು ನಕಲಿ ಮತದಾರರಿದ್ದರೆ ರಾಜ್ಯಾದ್ಯಂತ ಅದೆಷ್ಟು ನಕಲಿಗಳಿರಬಹುದು? ಎಂದು ಪ್ರಶ್ನಿಸಿದ ನಿರ್ಮಲಾ ಸೀತಾರಾಮನ್, ಈ ಅಕ್ರಮ ಹೆಸರುಗಳನ್ನು ತೆಗೆದುಹಾಕಿ ಮತಪಟ್ಟಿ ಶುದ್ಧೀಕರಿಸಬೇಕಲ್ಲವೇ? ಎಂದರು.

ಎಸ್‌ಐಆರ್ ಬಗ್ಗೆ ತಿಳಿಯದವರು!

'ಎಸ್‌ಐಆರ್' ಎಂಬುದೊಂದು 'ಪಿತೂರಿ' ಎಂಬ ಡಿಸಿಎಂ ಉದಯ ನಿಧಿ ಸ್ಟಾಲಿನ್ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸಚಿವೆ ನಿರ್ಮಲಾ ಸೀತಾರಾಮನ್, 'ಎಸ್‌ಐಆರ್' ಎಂದರೇನು ಎಂಬುದೇ ಡಿಸಿಎಂಗೆ ತಿಳಿಯದು. ಏನೋ ಮಾತನಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.ಚುನಾವಣಾ ಆಯೋಗ ಪ್ರತಿ ಚುನಾವಣೆಗೂ ಮುನ್ನ 'ಎಸ್‌ಐಆರ್' ನಡೆಸಬೇಕೆಂದು ಸಂವಿಧಾನವೇ ಹೇಳುತ್ತದೆ. ಆದರೆ ಡಿಎಂಕೆ ಸಂವಿಧಾನದ ವಿರುದ್ಧವೇ ಪ್ರತಿಭಟಿಸುತ್ತಿದೆ ಎಂದು ಸಚಿವೆ ಟೀಕಿಸಿದರು.ರಾಜ್ಯದಲ್ಲಿ ಹಿಂದೆ 13 ಬಾರಿ ಎಸ್ ಐಆರ್ ನಡೆದಿದೆ. ಆಗೆಲ್ಲಾ ಡಿಎಂಕೆ ವಿರೋಧಿಸಿಲ್ಲ. ಈಗ ಸರಕಾರದ ವೈಫಲ್ಯವನ್ನು ಜನರಿಂದ ಮರೆಮಾಡಲು ಮತ್ತು ಜನರ ಗಮನ ಬೇರೆಡೆ ಸೆಳೆಯಲು ಡಿಎಂಕೆ ನಾಯಕರು 'ಎಸ್‌ಐಆರ್' ವಿರೋಧಿಸುವ ನಾಟಕವಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಮತದಾರರ ಹಕ್ಕನ್ನು 'ಎಸ್‌ಐಆರ್' ಕಸಿಯಲ್ಲ. ಹಾಗೇನಾದರೂ ಆಗಿದ್ದು, ಅದಕ್ಕೆ ದಾಖಲೆಗಳಿದ್ದರೆ ಚುನಾವಣಾ ಆಯೋಗಕ್ಕೆ ನೀಡಲಿ, ಆಯೋಗ ಕ್ರಮ ಕೈಗೊಳ್ಳುತ್ತದೆ ಎಂದು ಸಚಿವೆ ಸ್ಪಷ್ಟಪಡಿಸಿದರು.

ಶುದ್ಧೀಕರಣ: ಚುನಾವಣಾ ಆಯೋಗ ಸದ್ಯ 9 ರಾಜ್ಯ-3 ಕೇಂದ್ರಾಡಳಿತ ಪ್ರದೇಶಗಳಲ್ಲಿ 'ಎಸ್‌ಐಆರ್' ಆರಂಭಿಸಿದೆ. ನಕಲಿ ಮತದಾರರ ಹೆಸರು ತೆಗೆದುಹಾಕಿ ಮತದಾರರ ಪಟ್ಟಿ ಶುದ್ಧೀಕರಿಸಲಿದೆ ಎಂದು ಸಚಿವೆ ಕೊಯಮತ್ತೂರಲ್ಲಿ ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದರು.

ಡಿಎಂಕೆ ಕಾರ್ಯಕರ್ತರ ಕೈಚಳಕ: ಪಿಎಂಕೆ ಆರೋಪ

ತಮಿಳುನಾಡಲ್ಲಿ ಸದ್ಯ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಸರಕಾರಿ ಅಧಿಕಾರಿಗಳು

ನಡೆಸಬೇಕಾದ ಕಾನೂನುಬದ್ಧ ಕಾರ್ಯ. ಆದರೆ, ಈ ಪ್ರಕ್ರಿಯೆಯಲ್ಲಿ ಡಿಎಂಕೆ ಸದಸ್ಯರೇ ನೇರ ಭಾಗಿಯಾಗಿದ್ದಾರೆ ಎಂದು ಪಟ್ಟಾಳಿ ಮಕ್ಕಳ್ ಕಚ್ಚಿ(ಪಿಎಂಕೆ) ಪಕ್ಷದ ನಾಯಕ ಅನ್ಬುಮಣಿ ರಾಮದಾಸ್ ಆರೋಪಿಸಿದ್ದಾರೆ. ಬೂತ್ ಮಟ್ಟದ ಅಧಿಕಾರಿಗಳಿಗೆ ಬದಲಾಗಿ 'ಡಿಎಂಕೆ' ಐಟಿ ವಿಭಾಗದ ಸದಸ್ಯರು, ಯುವ ಕಾರ್ಯಕರ್ತರು ಮತದಾರರ ಮನೆಗಳಿಗೇ ಭೇಟಿ ನೀಡಿ ಡಿಎಂಕೆ ಬೆಂಬಲಿಗರಿಗಷ್ಟೇ ಮತದಾರರ ಡೇಟಾ ಫಾರ್ಮ್ ವಿತರಿಸುತ್ತಿದ್ದಾರೆ ಎಂದು ಆರೋಪಿಸಿರುವ ಅನ್ಬುಮಣಿ, ಎಸ್‌ಐಆರ್ ನಿಷ್ಪಕ್ಷಪಾತ ಮೇಲ್ವಿಚಾರಣೆಗಾಗಿ ಬೇರೆ ರಾಜ್ಯಗಳ ಐಎಎಸ್ ಅಧಿಕಾರಿಗಳನ್ನು ವೀಕ್ಷಕರಾಗಿ ನೇಮಿಸಬೇಕು ಎಂದೂ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ನ.16ರಂದು ರಾಷ್ಟ್ರೀಯ ಪತ್ರಿಕಾ ದಿನಾಚರಣೆ

ಬೆಂಗಳೂರು: ಭಾರತೀಯ ಪತ್ರಿಕಾ ಮಂಡಳಿ ವತಿಯಿಂದ ನವೆಂಬರ್ 16ರಂದು ಮಧ್ಯಾಹ್ನ 12.30 ಗಂಟೆಗೆ ನವದೆಹಲಿಯ ರೈಸಿನಾ ರಸ್ತೆಯಲ್ಲಿರುವ ರಾಷ್ಟ್ರೀಯ ಮಾಧ್ಯಮ ಕೇಂದ್ರದಲ್ಲಿ ರಾಷ್ಟ್ರೀಯ ಪತ್ರಿಕಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಈ ವರ್ಷ ಹೆಚ್ಚುತ್ತಿರುವ ತಪ್ಪು ಮಾಹಿತಿಯ ನಡುವೆ ಪತ್ರಿಕಾ ವಿಶ್ವಾಸಾರ್ಹತೆಯನ್ನು ರಕ್ಷಿಸುವುದು ಎಂಬ ಘೋಷವಾಕ್ಯದೊಂದಿಗೆ ರಾಷ್ಟ್ರೀಯ ಪತ್ರಿಕಾ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಕೇಂದ್ರ ಮಾಹಿತಿ ಮತ್ತು ಪ್ರಸಾರ, ರೈಲ್ವೆ ಮತ್ತು ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಅಶ್ವಿನಿ ವೈಷ್ಣವ್ ಭಾಗವಹಿಸಲಿದ್ದಾರೆ. ಗೌರವ ಅತಿಥಿಯಾಗಿ ಕೇಂದ್ರ ಮಾಹಿತಿ, ಪ್ರಸಾರ ಮತ್ತು ಸಂಸದೀಯ ವ್ಯವಹಾರಗಳ ರಾಜ್ಯ ಖಾತೆ ಸಚಿವ ಡಾ.ಎಲ್. ಮುರುಗನ್ ಭಾಗವಹಿಸಲಿದ್ದು, ಭಾರತೀಯ ಪತ್ರಿಕಾ ಟ್ರಸ್ಟ್ ಮುಖ್ಯ ಕಾರ್ಯ ನಿರ್ವಾಹಕ ಅಧಿ ಕಾರಿ ವಿಜಯ್ ಜೋಶಿ ಪ್ರಮುಖ ಭಾಷಣ ಮಾಡ ಲಿದ್ದಾರೆ. ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷೆ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ರೈತರಿಗೆ ವಂಚನೆ: ಆರೋಪಿ ಬಂಧನ

ಬೆಂಗಳೂರು: ಟ್ರ್ಯಾಕ್ಟರ್‌ಗಳನ್ನು ಬಾಡಿಗೆಗೆ ಪಡೆಯುವ ನೆಪದಲ್ಲಿ ರೈತರಿಗೆ ವಂಚನೆ ಮಾಡುತ್ತಿದ್ದ ದೇವರಾಜ ಎಂಬ ಆರೋಪಿಯನ್ನು ಬೆಂಗಳೂರಿನ ಚಿಕ್ಕಜಾಲ ಪೊಲೀಸರು ಬಂಧಿಸಿದ್ದಾರೆ.ಆರೋಪಿ ದೇವರಾಜ ರೈತರನ್ನು ಸಂಪರ್ಕಿಸಿ, ಅವರ ಟ್ರ್ಯಾಕ್ಟರ್‌ಗಳನ್ನು ಬಾಡಿಗೆಗೆ ನೀಡುವಂತೆ ಕೇಳುತ್ತಿದ್ದ. ಪ್ರತಿ ಟ್ರ್ಯಾಕ್ಟರ್‌ಗೆ ತಿಂಗಳಿಗೆ 30 ಸಾವಿರ ರು.ಬಾಡಿಗೆ ನೀಡುತ್ತೇನೆ ಎಂದು ಭರವಸೆ ನೀಡುತ್ತಿದ್ದ. ಈ ಸಂಬಂಧ, ರೈತರೊಂದಿಗೆ ಅಗ್ರಿಮೆಂಟ್ ಕೂಡ ಮಾಡಿಸಿಕೊಂಡು ನಂಬಿಕೆ ಗಳಿಸುತ್ತಿದ್ದ. ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದ ರೈತರು, ದೇವರಾಜನ ಮಾತು ನಂಬಿ ತಮ್ಮ ಟ್ರ್ಯಾಕ್ಟರ್‌ಗಳನ್ನು ಆತನಿಗೆ ನೀಡಿದ್ದರು. ಇದರಿಂದ ವಂಚನೆಗೊಳಗಾದ ರೈತರು ಚಿಕ್ಕಜಾಲ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ, ಐಪಿಸಿ ಸೆಕ್ಷನ್ 420 ಅಡಿಯಲ್ಲಿ ಆರೋಪಿ ದೇವರಾಜನನ್ನು ಬಂಧಿಸಿದ್ದಾರೆ.

ಫೋನ್ ಇನ್ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ಜಲಮಂಡಳಿಯ ವತಿಯಿಂದ ನ.14ರ ಬೆಳಗ್ಗೆ 9.30ರಿಂದ 10.30ರ ವರೆಗೆ ನೇರ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಫೋನ್ ಇನ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಲಮಂಡಳಿ ಅಧ್ಯಕ್ಷ ಡಾ.ವಿ. ರಾಮ್ ಪ್ರಸಾತ್ ಮನೋಹರ್ ವಹಿಸಲಿದ್ದು, ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು- ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್ ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಲು ಕೋರಲಾಗಿದೆ. ಸಂಪರ್ಕ ಸಂಖ್ಯೆ: 080-22945119 ಮತ್ತು 080-22229639.

ಸಿದ್ದರಾಮಯ್ಯಗೆ ಪತ್ರ ಬರೆದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

ಕಬ್ಬು ದರ ಜಟಾಪಟಿಗೆ ರಾಜ್ಯ ಸರಕಾರ ಕಾರಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದ ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಕುರಿತಂತೆ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಹಿರಂಗ ಪತ್ರ ಬರೆದು ರಾಜ್ಯ ಸರಕಾರದ ಲೋಪಗಳನ್ನು ಎತ್ತಿ ಹಿಡಿದಿದ್ದಾರೆ. ಕೇಂದ್ರದ ಸುಧಾರಣಾ ಕ್ರಮಗಳನ್ನು ಮರೆಮಾಚುತ್ತಿರುವುದು ಸರಿಯಲ್ಲವೆಂದು ಅವರು ಆಕ್ಷೇಪಿಸಿದ್ದಾರೆ.

ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಕೇಂದ್ರವು ಬೆಲೆ ಸ್ಥಿರತೆ ಮತ್ತು ಮಾರುಕಟ್ಟೆ ವೈವಿಧ್ಯತೆ ಎರಡನ್ನೂ ಉತ್ತಮವಾಗಿಸಿದೆ. ಆದರೆ ಪಾವತಿ ಜಾರಿ, ನೀರಾವರಿ ಮತ್ತು ಸಬ್ಸಿಡಿ ವಿತರಣೆಯಂತಹ ಸ್ಥಳೀಯ ಅನುಷ್ಠಾನದ ಹೊಣೆ ರಾಜ್ಯ ಸರಕಾರದ ಮೇಲಿದೆ ಎಂಬುದನ್ನು ಮರೆಯದಿರಿ ಎಂದು ಸಿಎಂಗೆ ಚಾಟಿ ಬೀಸಿದ್ದಾರೆ.

ಕೇಂದ್ರ ಸರಕಾರ ರೈತರ ಕಲ್ಯಾಣಕ್ಕೆ, ಸಕ್ಕರೆ ವಲಯದಲ್ಲಿ ಸ್ಥಿರತೆ ಕಾಪಾಡಲು ಹಾಗೂ ದೀರ್ಘಕಾಲೀನ ಸುಸ್ಥಿರತೆ ಮತ್ತು ಸಮೃದ್ಧಿಯನ್ನು ಸೃಷ್ಟಿಸುವ ನೀತಿಗಳನ್ನು ಮುನ್ನಡೆಸಲು ಬದ್ಧವಾಗಿದೆ ಎಂದು ಸ್ಪಷ್ಟಪಡಿಸಿರುವ ಜೋಶಿ, ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳು ವಾಸ್ತವದಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ರಾಜ್ಯ ಸರಕಾರವೇ ಕಾರಣ ಎಂದು ಕೆಲ ಉದಾಹರಣೆಗಳ ಸಮೇತ ಪತ್ರ ಸಮರ ನಡೆದ್ದಾರೆ.

ರಾಜ್ಯದಲ್ಲಿ ಹೊಸ ಪಿಪಿಎ ಕೊರತೆ: ನೆರೆಯ ಮಹಾರಾಷ್ಟ್ರ 2025ರ ಏಪ್ರಿಲ್‌ನಲ್ಲಿ ವಿದ್ಯುತ್ ಖರೀದಿ ಹೊಸ ಒಪ್ಪಂದವನ್ನು ಜಾರಿಗೆ ತಂದಿದೆ. ಆದರೆ ಕರ್ನಾಟಕ ಮಾತ್ರ ಇನ್ನೂ 2017-18ರ ಪಿಪಿಎಯಲ್ಲೇ ಇದೆ. ಪಿಪಿಎ ಉತ್ಪಾದನಾ ಘಟಕಗಳು ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಭರವಸೆಯ ಆದಾಯ ಕಲ್ಪಿಸುತ್ತದೆ. ಬ್ಯಾಂಕ್‌ಗಳಿಂದ ಹಣಕಾಸು ನೆರವು ಪಡೆಯಲು ಅನುವು ಮಾಡಿಕೊಡುತ್ತದೆ, ಆದರೆ ಕರ್ನಾಟಕದಲ್ಲಿ ವಿದ್ಯುತ್ ಖರೀದಿ ಹೊಸ ಒಪ್ಪಂದದ ಕೊರತೆ ಸಕ್ಕರೆ ಕಾರ್ಖಾನೆಗಳನ್ನು ಸ್ಥಿರ ಆದಾಯದಿಂದ ವಂಚಿತಗೊಳಿಸಿದೆ. ರಾಜ್ಯ ಸರಕಾರ ವಿದ್ಯುತ್ ದರವನ್ನು 2023ರ ಏಪ್ರಿಲ್‌ನಲ್ಲಿ ಪ್ರತಿ ಯೂನಿಟ್‌ಗೆ 70 ಪೈಸೆ ಮತ್ತು 2025ರ ಮತ್ತೆ ಏಪ್ರಿಲ್‌ನಲ್ಲಿ ಮತ್ತೊಮ್ಮೆ ಸರ್‌ಚಾರ್ಜ್ ಆಗಿ ಪ್ರತಿ ಯೂನಿಟ್‌ಗೆ 36 ಪೈಸೆ ಹೀಗೆ ಎರಡು ಬಾರಿ ಹೆಚ್ಚಿಸಿತು. ಇದು ಸಕ್ಕರೆ ಕಾರ್ಖಾನೆಗಳು ಮಾತ್ರವಲ್ಲ ರೈತರ ಆದಾಯವನ್ನು ಮತ್ತಷ್ಟು ಕುಗ್ಗಿಸಿದೆ. ಕಳೆದ ಮೂರು ವರ್ಷಗಳಲ್ಲಿ ಎರಡು ಬಾರಿ ವಿದ್ಯುತ್ ದರ ಏರಿಕೆಯಿಂದಾಗಿ ಸಾರಿಗೆ ವೆಚ್ಚ ಟನ್‌ಗೆ 750 ರಿಂದ 800 ರು.ಗೆ ಏರಿದೆ. ಅಲ್ಲದೇ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಕಾಯಿದೆ 2024ರ ಅಡಿ ಹೊಸ ವಾಣಿಜ್ಯ ವಾಹನಗಳ ಮೇಲೆ ಹೆಚ್ಚುವರಿ ಶೇ.3ರಷ್ಟು ರಸ್ತೆ ತೆರಿಗೆ ಸಹ ವಿಧಿಸಿದ್ದು, ಇದು ರೈತರಿಗೆ ಮೂಲಭೂತ ವೆಚ್ಚಗಳನ್ನು ಹೆಚ್ಚಿಸಿದೆ ಎಂದು ತಿಳಿಸಿದರು.

ರಾಜ್ಯ ಸರಕಾರ ಅನುಸರಿಸಿದ ಹಣಕಾಸು ನೀತಿ ಮತ್ತು ನಿಯಂತ್ರಕ ಕ್ರಮಗಳು ವಾಸ್ತವದಲ್ಲಿ ಸಕ್ಕರೆ ಕಾರ್ಖಾನೆ ಹಾಗೂ ಕಬ್ಬು ಬೆಳೆಗಾರರು ಇಬ್ಬರ ಸಂಕಷ್ಟವನ್ನೂ ಉಲ್ಬಣಿಸಿದೆ. ತಮ್ಮ ಸರಕಾರದ ಲೋಪವನ್ನು ಕೇಂದ್ರದ ಮೇಲೆ ಹೊರಿಸುವುದು ಎಷ್ಟರ ಮಟ್ಟಿಗೆ ಸರಿ?

-ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕೇಂದ್ರದ ಸುಧಾರಣಾ ಕ್ರಮಗಳು

ಕೇಂದ್ರ ಸರಕಾರ 2025-26ರಲ್ಲಿ ಒಂದು ಕ್ವಿಂಟಾಲ್ ಕಬ್ಬಿಗೆ 355 ರು. ನ್ಯಾಯಯುತ ಮತ್ತು ಲಾಭದಾಯಕ ಬೆಲೆ ಅನ್ನು ಶೇ.10.25ರ ಇಳುವರಿ ದರದಲ್ಲಿ ಘೋಷಿಸಿದೆ. ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗ ಶಿಫಾರಸು ಮೇಲೆ ಈ ಬೆಲೆ ನಿಗದಿಪಡಿಸಿದ್ದು, ಇದು ಉತ್ಪಾದನಾ ವೆಚ್ಚದ ಮೇಲೆ ಶೇ.105ಕ್ಕಿಂತ ಹೆಚ್ಚಿನ ಅಂತರ ಒದಗಿಸುತ್ತದೆ, ಇದು ಕೇಂದ್ರ ಸರಕಾರ ರೈತರ ಹಿತರಕ್ಷಣೆಗಾಗಿ ಇರಿಸಿದ ಅಭೂತಪೂರ್ವ ಹೆಜ್ಜೆ. ಕೇಂದ್ರ ಸರಕಾರ ಎಥೆನಾಲ್ ಮಿಶ್ರಣ ಕಾರ್ಯದ ಮೂಲಕ ಸಕ್ಕರೆ ಕ್ಷೇತ್ರವನ್ನು ಬಲಪಡಿಸಿದೆ. ಸಕ್ಕರೆ ಕಾರ್ಖಾನೆಗಳಿಗೆ ಪರ್ಯಾಯ ಮತ್ತು ಸ್ಥಿರ ಆದಾಯದ ಮೂಲವನ್ನು ಕಲ್ಪಿಸಿದೆ. ರೈತರಿಗೆ ಕಬ್ಬಿನ ಮಾರಾಟದ ಬೆಲೆಯನ್ನೂ ಸುಧಾರಿಸಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

ಉತ್ಪಾದಕ ವಲಯವನ್ನೇ ಹಿಂಡಿದ ಸರಕಾರ: ರಾಜ್ಯ ಸರಕಾರ ರೈತರ ಮೇಲಿನ ಹೊರೆ ಇಳಿಸುವ ಕೆಲಸ ಮಾಡಬೇಕಿತ್ತು, ಆದರೆ ಬರೀ ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ, ಆರ್ಥಿಕತೆಯ ಉತ್ಪಾದಕ ವಲಯಗಳನ್ನು ಹಿಂಡಿ ಹಿಪ್ಪೆ ಮಾಡಿದೆ. ಸಕ್ಕರೆ ಕಾರ್ಖಾನೆಗಳಿಗೆ ನೀರು ಸರಬರಾಜು ಮತ್ತು ಲಿಫ್ಟಿಂಗ್ ಶುಲ್ಕವನ್ನು ವರ್ಷಕ್ಕೆ 5 ಲಕ್ಷದಿಂದ 1 ಕೋಟಿ ರು.ಗೆ ಏರಿಸಿದ್ದಲ್ಲದೆ, ಪ್ರತಿ ಯೂನಿಟ್‌ಗೆ ವಿದ್ಯುತ್‌ಗೆ 60 ಪೈಸೆ ಎನರ್ಜಿ ಸೆಸ್ ಸಹ ವಿಧಿಸಿದೆ. ಡೀಸೆಲ್ ಮೇಲಿನ ವ್ಯಾಟ್ ಅನ್ನು ಶೇ.50ರಷ್ಟು ಹೆಚ್ಚಿಸಿದೆ. ಹೆಚ್ಚುವರಿ ಆದಾಯವಾಗಿ 7ರಿಂದ 7,500 ರು. ಕೋಟಿ ಗಳಿಸಿದೆ. 30ಕ್ಕೂ ಹೆಚ್ಚು ಉತ್ಪನ್ನಗಳ ಮೇಲೆ ಶೇ.276ರಷ್ಟು ತೆರಿಗೆಗಳೊಂದಿಗೆ, ಈ ವರ್ಷ ಅಬಕಾರಿ ಒಂದರಿಂದಲೇ 39,000 ಕೋಟಿ ರು. ಸಂಗ್ರಹಿಸುವ ನಿರೀಕ್ಷೆ ಹೊಂದಿರುವ ರಾಜ್ಯ ಸರಕಾರ, ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳ ಬಗ್ಗೆ ಅಸಡ್ಡೆ ತೋರುತ್ತಿದೆ ಎಂದು ಸಿಎಂಗೆ ಬರೆದ ಪತ್ರದಲ್ಲಿ ಪ್ರಲ್ಹಾದ್ ಜೋಶಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಭಯ ಸೇವಾ ಫೌಂಡೇಷನ್ ವತಿಯಿಂದ ಸೇವಾ ಸಂಕಲ್ಪ ಕಾರ್ಯಕ್ರಮದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಯಿತು. ಈ ವೇಳೆ ಉದ್ಯಮಿ ಜಯಪ್ರಸಾದ್ ಶೆಟ್ಟಿ, ಬಂಟರ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಎಲ್. ಎನ್.ಹೆಗಡೆ, ಅಭಯ ಸೇವಾ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಎಂ.ಬಿ.ಉಮೇಶ್ ಶೆಟ್ಟಿ, ನಿಕಟಪೂರ್ವ ಬಿಬಿಎಂಪಿ ಸದಸ್ಯ ಕೆ. ಉಮೇಶ್ ಶೆಟ್ಟಿ, ಬಿಜೆಪಿ ಮುಖಂಡ ಬೇಳೂರು ರಾಘವೇಂದ್ರ ಶೆಟ್ಟಿ, ಬಂಟ ಸಂಘದ ಉಪಾಧ್ಯಕ್ಷ ಸಂತೋಷ್ ಶೆಟ್ಟಿ, ಬಿಜೆಪಿ ಮಹಿಳಾ ಮುಖಂಡ ಕಾಂತಿ ಶೆಟ್ಟಿ ಸೇರಿ ಹಲವರಿದ್ದರು.

ಹೈಕಮಾಂಡ್ ಬಳಿ ಸಚಿವರು, ಸರಕಾರದ ಮೌಲ್ಯಮಾಪನ ವರದಿ

ನಡೆಯದು ನವೆಂಬರ್ ಕ್ರಾಂತಿ, ಸದ್ಯಕ್ಕೇನಿದ್ದರೂ ಶಾಂತಿ ಜಪ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ರಾಜ್ಯದಲ್ಲಿ ನವೆಂಬರ್ ಕ್ರಾಂತಿಯ ಸಾಧ್ಯತೆ ದೂರವಾಗಿದ್ದು, ಬದಲಾಗಿ ಮುಂದಿನ ವರ್ಷದಲ್ಲಾಗುವ ಮೌನ ಕ್ರಾಂತಿಯ ಸಿದ್ಧತೆಗಳು ನಡೆಯುವ ಸಾಧ್ಯತೆಗಳಿವೆ ಎಂದು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ.

ಮೂರು ತಿಂಗಳ ಹಿಂದೆ ಮಾಜಿ ಸಚಿವ ಕೆ.ಎನ್. ರಾಜಣ್ಣ ಹೇಳಿದಂತೆ ಹಾಗೂ ಕಳೆದ ಒಂದು ತಿಂಗಳಿನಿಂದ ತೀರಾ ಚರ್ಚೆಗೆ ಗ್ರಾಸವಾಗಿದ್ದ ರಾಜ್ಯದಲ್ಲಿ ರಾಜಕೀಯ ಕ್ರಾಂತಿ ನಡೆಯುವ ಯಾವುದೇ ಲಕ್ಷಣಗಳು ರಾಜ್ಯ ರಾಜಕೀಯದಲ್ಲಿ ಕಾಣಿಸುತ್ತಿಲ್ಲ, ಕಾರಣ ನವೆಂಬರ್ 14ರ ವರೆಗೂ ಬಿಹಾರ ಚುನಾವಣೆ ಗುಂಗಿನಲ್ಲಿರುವ ಕಾಂಗ್ರೆಸ್ ಹೈಕಮಾಂಡ್ ನಂತರದಲ್ಲೂ ರಾಜ್ಯ ಕಾಂಗ್ರೆಸ್ ಸರಕಾರದ ವಿಚಾರಕ್ಕೆ ತಲೆ ಹಾಕುವ ಚಿಂತನೆಯಲ್ಲಿಲ್ಲ. ಇದರ ಮಧ್ಯೆ ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ ಅವರು ಬಹುತೇಕ ನವೆಂಬರ್ ಅಂತ್ಯದ ವರೆಗೂ ವಿದೇಶ ಪ್ರವಾಸದಲ್ಲಿರುತ್ತಾರೆ. ಆದ ಕಾರಣ ರಾಜ್ಯ ಕಾಂಗ್ರೆಸ್‌ನಲ್ಲಾಗಲಿ, ಕಾಂಗ್ರೆಸ್ ಸರಕಾರದಲ್ಲಾಗಲಿ ಭಾರೀ ಬದಲಾವಣೆಗಳು ನಡೆಯುತ್ತವೆ. ದೊಡ್ಡ ಕ್ರಾಂತಿಯೇ ನಡೆದು ಹೋಗುತ್ತದೆ ಎನ್ನುವುದು ತುಂಬಾ ದೂರದ ಮಾತು ಎಂದು ಪಕ್ಷದ ದೆಹಲಿ ಮೂಲಗಳು ತಿಳಿಸಿವೆ.

ಇನ್ನೂ ಡಿಸೆಂಬರ್ 8ರ ನಂತರ ರಾಜ್ಯ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಯಲಿದ್ದು, ಆ ಸಂದರ್ಭದಲ್ಲೂ ರಾಜಕೀಯ ಕ್ರಾಂತಿಗಳಾಗುವ ಸಾಧ್ಯತೆ ಕ್ಷೀಣ. ಹಾಗೆಂದ ಮಾತ್ರಕ್ಕೆ ರಾಜ್ಯ ಕಾಂಗ್ರೆಸ್ ಅಥವಾ ಕಾಂಗ್ರೆಸ್ ಸರಕಾರದಲ್ಲಿ ಯಾವುದೇ ಬದಲಾವಣೆಯೇ ಆಗುವುದಿಲ್ಲ ಎಂದೇನೂ ಅಲ್ಲ, ಬದಲಾಗುವುದು ನಿಶ್ಚಿತ, ಆದರೆ ಅದರೆ ಸದ್ಯಕ್ಕಿಲ್ಲ. ಬಹುಶಃ ಜನವರಿ ವೇಳೆಗೆ ಸರಕಾರದಲ್ಲಿ ಒಂದಷ್ಟು ಬದಲಾವಣೆಗಳಾಗುವ ಸಾಧ್ಯತೆಗಳು ಹೆಚ್ಚಾಗಿದ್ದು, ಇದರ ಎಳೆದಾಟ ಮಾರ್ಚ್ ತಿಂಗಳ ತನಕವೂ ನಡೆಯಬಹುದು ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ. ಹೀಗಾಗಿ ನವೆಂಬರ್ ಕ್ರಾಂತಿಯ ಚರ್ಚೆಗಳು ದಿನಗಳೆದಂತೆ ಅಪ್ರಸ್ತುತವಾಗುತ್ತಿದ್ದು, ಸದ್ಯದ ಶಾಂತ ರಾಜಕಾರಣ ಮುಂದುವರಿಯಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ನವೆಂಬರ್ ಕ್ರಾಂತಿ ಏಕೆ ನಡೆಯದು?

ಈಗಾಗಲೇ ನಿಗದಿಯಾಗಿರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನ.15 ರಂದು ದೆಹಲಿಗೆ ತೆರಳಲಿದ್ದು, ಅಲ್ಲಿ ಕಾಂಗ್ರೆಸ್ ನ ಹಿರಿಯ ನಾಯಕ ಕಪಿಲ್ ಸಿಬಲ್ ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಒಂದೊಮ್ಮೆ ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿಯಾದರೂ ಸಂಪುಟ ಪುನಾರಚನೆಯಾಗಲಿ, ನಾಯಕತ್ವ ಬದಲಾವಣೆ ವಿಚಾರಗಳನ್ನಾಗಲಿ ಚರ್ಚಿಸುವ ಸಾಧ್ಯತೆ ತೀರಾ ಕಡಿಮೆ. ಅದರಲ್ಲೂ ಬಿಹಾರದಲ್ಲಿ ಕಾಂಗ್ರೆಸ್ ಸಾಧನೆ ಕಡಿಮೆಯಾದರೂ ರಾಹುಲ್ ಗಾಂಧಿ ಭೇಟಿ ಸಾಧ್ಯತೆಯೂ ಕ್ಷೀಣವಾಗಲಿದೆ ಎನ್ನುತ್ತದೆ ಕಾಂಗ್ರೆಸ್ ಉನ್ನತ ಮೂಲಗಳು. ಅಷ್ಟಕ್ಕೂ ರಾಹುಲ್ ಗಾಂಧಿ ಅವರು ನ.14ರಿಂದ 22ರ ವರೆಗೂ ಥಿಲ್ಯಾಂಡ್ ಸೇರಿದಂತೆ ವಿವಿಧೆಡೆ ಪ್ರವಾಸ ಕೈಗೊಳ್ಳುವ ಸಾಧ್ಯತೆಯಿದೆ. ಇದರ ಮಧ್ಯೆ ಮೂರು ದಿನಗಳ ದೆಹಲಿ ಪ್ರವಾಸ ಮಾಡಬೇಕಿದ್ದ ಮುಖ್ಯಮಂತ್ರಿ ಅವರು ಒಂದೇ ದಿನಕ್ಕೆ ಸೀಮಿತಗೊಳಿಸಿದ್ದಾರೆ. ಹೀಗಾಗಿ ನವೆಂಬರ್ ಅವಧಿಯಲ್ಲಿ ಕ್ರಾಂತಿ ನಡೆಯುತ್ತದೆ ಎನ್ನುವುದು ಅಸಾಧ್ಯ. ಆದರೆ ಡಿಸೆಂಬರ್ ನಂತರದಲ್ಲಿ ಸರಕಾರದಲ್ಲಿ ಭಾರೀ ಬದಲಾವಣೆಯಾಗಲಿದ್ದು, ಇದಕ್ಕಾಗಿ ವರಿಷ್ಠರು ಈಗಾಗಲೇ ನಿರ್ಧಾರ ಮಾಡಿದ್ದಾರೆ ಎಂದು ಪಕ್ಷದ ದೆಹಲಿ ಮೂಲಗಳು ತಿಳಿಸಿವೆ.

ಬಿಹಾರ ಫಲಿತಾಂಶದಿಂದ ರಾಜಕ್ಕೇನು?

ಬಹು ನಿರೀಕ್ಷಿತ ಬಿಹಾರ ವಿಧಾನಸಭಾ ಚುನಾವಣೆ ನಂತರ ರಾಜ್ಯ ರಾಜಕಾರಣದಲ್ಲಿ ಭಾರೀ ಬದಲಾವಣೆ ನಡೆಯಲಿದ್ದು, ಅದರಲ್ಲೂ ಕಾಂಗ್ರೆಸ್ ಸರಕಾರದಲ್ಲಿ ಕ್ರಾಂತಿಯೇ ನಡೆದು ಹೋಗುತ್ತದೆ ಎನ್ನುವ ಚರ್ಚೆಗಳು ತೀರಾ ಚರ್ಚೆಗೆ ಗ್ರಾಸವಾಗಿದೆ. ಅದು ಎಷ್ಟರ ಮಟ್ಟಿಗೆ ಎಂದರೆ ಕಾಂಗ್ರೆಸ್‌ನಲ್ಲಿ ಬದಲಾವಣೆ ನಡೆಯಲಿದೆ ಎಂದು ಪ್ರತಿಪಕ್ಷ ಬಿಜೆಪಿಯೇ ಕಾತರದಿಂದ ಕಾಯುತ್ತಾ, ಅದನ್ನೇ ಕನವರಿಸುವಂತಾಗಿದೆ. ಆದರೆ ರಾಜಕೀಯ ವಿಶ್ಲೇಷಕರು ಹಾಗೂ ತಜ್ಞರ ಪ್ರಕಾರ ಬಿಹಾರ ಚುನಾವಣೆ ಫಲಿತಾಂಶ ರಾಜ್ಯ ಕಾಂಗ್ರೆಸ್ ಸರಕಾರದ ಮೇಲೆ ಅಷ್ಟೇನೂ ಭಾರೀ ಪರಿಣಾಮವನ್ನೇನೋ ಉಂಟು ಮಾಡಲಾರದು. ಅಂದರೆ ಬಿಹಾರದಲ್ಲಿ ಆರ್‌ಜೆಡಿ ಪಕ್ಷ ಅಧಿಕಾರಕ್ಕೆ ಬಂದರೆ ಅದರಲ್ಲೂ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗಳಿಸಿ ಸರಕಾರದಲ್ಲಿ ಭಾಗಿಯಾದರೆ ಕಾಂಗ್ರೆಸ್ ವರಿಷ್ಠರು ಇನ್ನಷ್ಟು ಬಲಿಷ್ಟರಾಗಲಿದ್ದಾರೆ. ಆ ಹುಮ್ಮಸ್ಸಿನಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲೂ ಅನೇಕ ನಿಷ್ಠುರ ನಿರ್ಧಾರಗಳನ್ನು ಕೈಗೊಳ್ಳಲಿದೆ. ನಾಯಕತ್ವ ಬದಲಾವಣೆಗೂ ಕೈ ಹಾಕಿದರೂ ಅಚ್ಚರಿ ಇಲ್ಲ ಎನ್ನುವ ಮಟ್ಟಿಗೆ ರಾಜ್ಯ ಕಾಂಗ್ರೆಸ್‌ನಲ್ಲಿ ಚರ್ಚೆಗಳು ನಡೆಯುತ್ತಿವೆ. ಆದರೆ ದೇಶದ ಬಲಿಷ್ಠ ಸರಕಾರ ಇರುವ ಏಕೈಕ ರಾಜ್ಯ ಕರ್ನಾಟಕದಲ್ಲಿ ದಿಢೀರ್ ಕ್ರಾಂತಿ ನಡೆಸುವ ಸ್ಥಿತಿಯಲ್ಲಿ ಕಾಂಗ್ರೆಸ್ ಇಲ್ಲ ಎನ್ನಲಾಗಿದೆ. ಬದಲಾಗಿ ಅಹಿಂದ ಜತೆಗೆ ಪ್ರಬಲ ಜಾತಿಗಳನ್ನೂ ತನ್ನತ್ತ ಸೆಳೆದು ಮುಂಬರುವ 2028ರ ಚುನಾವಣೆಗೆ ಈಗಲೇ ಸಜ್ಜಾಗಬೇಕಾದ ಸವಾಲಿನ ಚಿಂತನೆಯಲ್ಲಿದೆ. ಇದರ ಮಧ್ಯೆ ರಾಜ್ಯ ಸರಕಾರದ ಪ್ರಗತಿ ಹಾಗೂ ಫಲಿತಾಂಶದ ವರದಿಯನ್ನು ತರಿಸಿಕೊಂಡಿರುವ ವರಿಷ್ಠರು, ಸಚಿವರ ಸಾಧನೆ ಕುರಿತ ಮಾಹಿತಿಯನ್ನೂ ತರಿಸಿಕೊಂಡಿದ್ದಾರೆ. ಇದನ್ನಾಧರಿಸಿ ಪಕ್ಷ ವರಿಷ್ಠರು, ಸರಕಾರದಲ್ಲಿ ಅನೇಕ ಅನಿರೀಕ್ಷಿತ ನಿರ್ಧಾರಗಳೂ ಸೇರಿದಂತೆ ಭಾರೀ ಬದಲಾವಣೆಗಳು ಮಾಡುವ ಸಾಧ್ಯತೆ ಹೆಚ್ಚಾಗಿದೆ. ಆದರೆ ಕ್ರಾಂತಿ ಹೆಸರಿನಲ್ಲಿ ಅನಗತ್ಯ ಪ್ರಯೋಗ ನಡೆಸಿ ಅದರ ಪರಿಣಾಮಗಳ ಹೋರಾಡುವ ಗೋಜಿಗೆ ಹೋಗುವ ಸಾಧ್ಯತೆಗಳು ಸದ್ಯಕ್ಕೆ ಕ್ಷೀಣ ಎನ್ನಲಾಗಿದೆ.

ಸತ್ಯಸಾಯಿ ಜನ್ಮೋತ್ಸವ: ಸೈಕ್ಲಿಂಗ್ ಯಾತ್ರೆ

ಬೆಂಗಳೂರು: ಶ್ರೀ ಸತ್ಯ ಸಾಯಿ ಇನ್ಸಿಟ್ಯೂಟ್ ಆಫ್ ಹೈಯರ್ ಲರ್ನಿಂಗ್ ಸುಸ್ಥಿರತೆ, ಜಾಗೃತಿ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಉಪಕ್ರಮಗಳ ಭಾಗವಾಗಿ ಮತ್ತು ಅದರ ಪೂಜ್ಯ ಸಂಸ್ಥಾಪಕ ಕುಲಪತಿ ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಅವರ 100ನೇ ಜನ್ಮ ದಿನಾಚರಣೆಯ ಸ್ಮರಣಾರ್ಥ ವಿಶಿಷ್ಟ ಸೈಕ್ಲಿಂಗ್ ಯಾತ್ರೆ ಪ್ರಾರಂಭಿಸಿದೆ. ಕಾಡುಗೋಡಿಯಲ್ಲಿರುವ ಶ್ರೀ ಸತ್ಯ ಸಾಯಿ ಇನ್ಸಿಟ್ಯೂಟ್ ಆಫ್ ಹೈಯರ್ ಲರ್ನಿಂಗ್‌ನ ಬೃಂದಾವನ ಕ್ಯಾಂಪಸ್‌ನಿಂದ ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನು ಒಳಗೊಂಡ 150 ಸೈಕ್ಲಿಸ್ಟ್‌ಗಳು ಎಸ್‌ಐಎಚ್‌ಎಲ್‌ನ ನಂದಿಗಿರಿ ಕ್ಯಾಂಪಸ್ ಮೂಲಕ ಆಂಧ್ರಪ್ರದೇಶದ ಸತ್ಯಸಾಯಿ ಜಿಲ್ಲೆಯ ಪ್ರಶಾಂತಿ ನಿಲಯಕ್ಕೆ 161 ಕಿ.ಮೀ ಪ್ರಯಾಣವನ್ನು ಪ್ರಾರಂಭಿಸಿದರು. ಸವಾರರು ಗುರುವಾರ ಸಂಜೆ ಪ್ರಶಾಂತಿ ನಿಲಯಂನ ಶ್ರೀ ಸತ್ಯಸಾಯಿ ಹಿಲ್ ವ್ಯೂ ಕ್ರೀಡಾಂಗಣವನ್ನು ತಲುಪುವ ನಿರೀಕ್ಷೆಯಿದೆ.

ಬಿಹಾರ ಫಲಿತಾಂಶದ ಬಳಿಕವೂ ಮತಗಳವು ಆರೋಪ: ಅಶೋಕ

ಬೆಂಗಳೂರು: ಬಿಹಾರ ಚುನಾವಣೆಯಲ್ಲಿ ಎನ್‌ಡಿಎ ಗೆಲ್ಲಲಿದೆ ಎಂದು ಸಮೀಕ್ಷೆಗಳು ಹೇಳು ತ್ತಿದ್ದು, ಫಲಿತಾಂಶ ಬಂದ ಬಳಿಕ ರಾಹುಲ್ ಗಾಂಧಿ ಮತಗಳ್ಳತನ ಆರೋಪ ಮಾಡುವುದು ಖಂಡಿತ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಹಾರದ್ದು ಪ್ರತಿಷ್ಠಿತ ಚುನಾವಣೆಯಾಗಿದೆ, ಅಲ್ಲಿ ನಕ್ಸಲ್ ಚಟುವಟಿಕೆ ಹೆಚ್ಚಿದ್ದರೂ ಈ ಬಾರಿ ಉತ್ತಮವಾಗಿ ಮತದಾನ ನಡೆದಿದೆ. ಅಮಿತ್ ಶಾ ಗೃಹ ಸಚಿವರಾದ ಬಳಿಕ ನಕ್ಸಲ್ ಚಟುವಟಿಕೆ ನಿಯಂತ್ರಣಕ್ಕೆ ತಂದಿದ್ದಾರೆ. 12ಕ್ಕೂ ಹೆಚ್ಚು ಸಂಸ್ಥೆಗಳು ಸಮೀಕ್ಷೆ ಮಾಡಿದ್ದು, ಎನ್‌ಡಿಎ ಅಧಿಕಾರಕ್ಕೆ ಬರಲಿದೆ ಎಂದು ಅಂದಾಜಿಸಲಾ ಗಿದೆ. ಕಾಂಗ್ರೆಸ್‌ನ ಘಟಬಂಧನಕ್ಕೆ ಬೆಂಬಲ ಇಲ್ಲ ಎಂದು ಹೇಳಲಾಗಿದೆ ಎಂದರು. ಬಿಹಾರ ಚುನಾವಣೆಯ ಫಲಿತಾಂಶ ಬಂದ ಬಳಿಕ ರಾಹುಲ್ ಗಾಂಧಿ ಮತಗಳ್ಳತನದ ಆರೋಪ ಮಾಡುತ್ತಾರೆ. ರಾಹುಲ್ ಗಾಂಧಿ ನಾಯಕತ್ವದಲ್ಲಿ ಕಾಂಗ್ರೆಸ್ ಸರಣಿ ಸೋಲು ಕಾಣುತ್ತಿದೆ. ಬಿಹಾರ ಚುನಾವಣೆಯ ಫಲಿತಾಂಶ ಬಂದ ನಂತರ ಅವರು ವಿದೇಶ ಪ್ರವಾಸಕ್ಕೆ ತೆರಳುತ್ತಾರೆ. ಒಂದು ಕಡೆ ಲೋಕಸಭೆಯಲ್ಲೂ ಅವರು ಕೆಲಸ ಮಾಡುತ್ತಿಲ್ಲ, ಮತ್ತೊಂದು ಕಡೆ ಪಕ್ಷಕ್ಕಾಗಿಯೂ ಕಾರ್ಯ ನಿರ್ವಹಿಸುತ್ತಿಲ್ಲ ಎಂದರು. ದೆಹಲಿಯಲ್ಲಾದ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರ ಕಠಿಣ ಕ್ರಮ ಕೈಗೊಳ್ಳುತ್ತಿದೆ. ಪರಪ್ಪನ ಅಗ್ರಹಾರದಲ್ಲಿ ಉಗ್ರರಿಗೆ ಮೊಬೈಲ್ ಕೊಟ್ಟಿದ್ದು ಯಾರು ಎಂದು ತನಿಖೆ ಮಾಡಬೇಕಿದೆ ಅಥವಾ ಮೊಬೈಲ್ ಬಳಸಿ ಏನು ಮಾಡಿದ್ದಾರೆ ಎಂದು ತನಿಖೆ ಮಾಡಬೇಕಿತ್ತು. ಆದರೆ ಈ ವಿಡಿಯೊ ಹೊರಗೆ ಬಂದಿದ್ದು ಹೇಗೆ ಎಂದು ತನಿಖೆ ಮಾಡಲಾಗುತ್ತಿದೆ. ಕೇಂದ್ರ ಸರಕಾರದಂತೆಯೇ ರಾಜ್ಯ ಸರಕಾರ ಕೂಡ ಉಗ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಮುಸ್ಲಿಮರ ಪರವಾದ ಮೃದುವಾದ ಧೋರಣೆ ಒಳ್ಳೆಯದಲ್ಲ, ಅಮಿತ್ ಶಾ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್‌ನವರಿಗೆ ಇಲ್ಲ ಎಂದು ಅಶೋಕ ಹೇಳಿದರು.

ಮಕ್ಕಳ ಕಲ್ಯಾಣಕ್ಕೆ ಆಸರೆ ಕಾರ್ಯಕ್ರಮ

ಬೆಂಗಳೂರು: ರಾಷ್ಟ್ರೀಯ ದತ್ತು ಜಾಗೃತಿ ಮಾಸಾಚರಣೆಯ ಅಂಗವಾಗಿ, ಬೆಂಗಳೂರು ಪೂರ್ವ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಶಿಶು ಮಂದಿರದ ಸಹಯೋಗದೊಂದಿಗೆ ಆಸರೆ ಎಂಬ ಒಂದು ತಿಂಗಳ ದತ್ತು ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಈ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾದ ಡ್ರೈವ್ ಫಾರ್ ಆಸರೆ ಎಂಬ ಮಹಿಳಾ ಇ-ಆಟೋ ರ‍್ಯಾಲಿಯು, ಕಾನೂನುಬದ್ಧ ದತ್ತು ಸ್ವೀಕಾರದ ಮಹತ್ವ ಮತ್ತು ಪ್ರತಿಯೊಂದು ಮಗುವಿಗೂ ಪ್ರೀತಿಯ ಕುಟುಂಬ ಹೊಂದುವ ಹಕ್ಕಿನ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿತು. ಕೆ.ಆರ್. ಪುರಂನಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಚೇರಿಯಿಂದ ಆರಂಭವಾದ ಈ ರ‍್ಯಾಲಿಯು, ಶಿಶು ಮಂದಿರದಲ್ಲಿ ಮುಕ್ತಾಯಗೊಂಡಿತು. ಅನಾಥ ಮಕ್ಕಳಿಗೆ ಶಾಶ್ವತ ಕುಟುಂಬದ ಆಸರೆ ನೀಡುವ ಪಯಣ ಸಾಂಕೇತಿಕವಾಗಿ ಬಿಂಬಿಸಿತು. ಮಕ್ಕಳ ರಕ್ಷಣೆಗಾಗಿ ವಿವಿಧ ಇಲಾಖೆಗಳ ಸಹಯೋಗದ ಅಗತ್ಯವನ್ನು ಒತ್ತಿಹೇಳುವ ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು. ಈ ಮಹತ್ವದ ಸಮಾರಂಭದಲ್ಲಿ, ಬೆಂಗಳೂರಿನ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಯೋಜನಾ ನಿರ್ದೇಶಕಿ ಹಲೀಮಾ, ಕೆ.ಆರ್. ಪುರಂನ ಬೆಂಗಳೂರು ಪೂರ್ವ ತಹಶೀಲ್ದಾರ್ ರಾಜೀವ್ , ವೈಟ್‌ಫೀಲ್ಡ್ ಎಸಿಪಿ ಮತ್ತು ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ ರೀನಾ ಸುವರ್ಣ ಉಪಸ್ಥಿತರಿದ್ದರು.

ACRE MAKING ASSETS WORK

ಅಸೆಟ್ಸ್ ಕೇರ್ ಆ್ಯಂಡ್ ರೀಕನ್‌ಸ್ಟ್ರಕ್ಷನ್‌ಎಂಟರ್‌ಪ್ರೈಸ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒನ್ ಬಿಕೆಸಿ, ಪ್ಲಾಟ್ ಸಂಖ್ಯೆ. ಸಿ - 66, ಜಿ - ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051. ದೂರವಾಣಿ : 022 68643101.
ನೋಂದಾಯಿತ ಕಚೇರಿ: 14 ನೇ ಮಹಡಿ, ಇರಾಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ - 110019.
ಇಮೇಲ್ : acre.arc@acreindia.in I ವೆಬ್‌ಸೈಟ್: www.acreindia.in I CIN : U65993DL2002PLC115769

ಅನುಬಂಧ IV-ಎ
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ಮತ್ತು ನಿಯಮ 9(1)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಅಸೆಟ್ಸ್ ಕೇರ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿ. [CIN: U65993DL2002PLC115769] (''ಸೆಕ್ಯೂರ್ಡ್ ಕ್ರೆಡಿಟರ್'')**ಇವರಿಗೆ ಮಾರ್ಟ್‌ಗೇಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀನತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಕೃತ ಅಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **07.11.2025**ರ ತನಕದ ಬಡ್ಡಿ **ರೂ. 47,02,764/- (ರೂಪಾಯಿ ನಲವತ್ತ ಏಳು ಲಕ್ಷ ಎರಡು ಸಾವಿರದ ಏಳು ನೂರ ಅರವತ್ತ ನಾಲ್ಕು ಮಾತ್ರ)** ಅಂದರೆ **ರೂ. 34,60,303/- (ರೂಪಾಯಿ ಮೂವತ್ತ ನಾಲ್ಕು ಲಕ್ಷ ಅರವತ್ತು ಸಾವಿರದ ಮುನ್ನೂರ ಮೂರು ಮಾತ್ರ)** ಸಾಲ ಖಾತೆ ಸಂಖ್ಯೆ. **V024OXXIII** [ಹಿಂದಿನ ಸಾಲ ಖಾತೆ ನಂ. **HHLBAN00332134** (''ಹಳೇ ಸಾಲ ಖಾತೆ'')] ಯಿಂದ ಬಾಕಿ ಇದ್ದು ಮತ್ತು **ರೂ. 12,42,461/- (ರೂಪಾಯಿ ಹನ್ನೆರೆಡು ಲಕ್ಷ ನಲವತ್ತ ಎರಡು ಸಾವಿರದ ನಾಲ್ಕು ನೂರ ಅರವತ್ತ ಒಂದು ಮಾತ್ರ)** ಸಾಲ ಖಾತೆ ಸಂಖ್ಯೆ. **V025OXXIII** [ಹಿಂದಿನ ಸಾಲ ಖಾತೆ ನಂ. **HHLBAN00341276** (''ಹಳೇ ಸಾಲ ಖಾತೆ'')] ಯಲ್ಲಿ **ವಿಪುಲ್ ಕುಮಾರ್ ದೇಸಾಯಿ ಮತ್ತು ಮೋಹಿನಿ ದೇಸಾಯಿ ಅಲಿಯಾಸ್ ಮೋಹಿನಿ ವಿಪುಲ್ ದೇಸಾಯಿ** ಅವರಿಂದ ಬಾಕಿ ಇರುತ್ತದೆ. ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು) ನಂತೆ ಕಾನೂನು ಸಂಬಂಧಿತ ವೆಚಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **08.11.2025**ರಿಂದ ವಿಷ್ಯದ ಬಡ್ಡಿಯ ವಸೂಲಿಗಾಗಿ **''ಎಲ್ಲಿದೆಯೊ ಹಾಗೆ''**, **''ಏನಿದೆಯೊ ಹಾಗೆ''** ಮತ್ತು **''ಯಾವುದೇ ರಿಕೊರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **29.11.2025**ರಂದು **ಸಂಜೆ 05.00 ರಿಂದ ಸಂಜೆ 06.00 ರವರೆಗೆರ** ತನಕ ಮಾರಾಟ ಮಾಡಲಿದ್ದಾರೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (**''ಎಸ್‌ಸಿಎಲ್''**) (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂ. ಲಿಮಿಟೆಡ್‌ಗೆ (**''ಐಎಆರ್‌ಸಿಎಲ್''**) ದಿನಾಂಕ **31.12.2021**ರ ನಿಯೋಜನೆ ಒಪ್ಪಂದದ ಪ್ರಕಾರ, ಹಳೆಯ ಸಾಲ ಖಾತೆಗಳು ಹೊಂದಿರುವ ಸಂಖ್ಯೆ **HHLBAN00332134** ಮತ್ತು **HHLBAN00341276**, ಜೊತೆಗೆ ಎಲ್ಲಾ ಹಕ್ಕು(ಗಳು), ಶೀರ್ಷಿಕೆ(ಗಳು), ಆಸಕ್ತಿ(ಗಳು), ಆಧಾರವಾಗಿರುವ ಭದ್ರತೆ(ಗಳು), ಪ್ರತಿಜ್ಞೆ(ಗಳು) ಮತ್ತು/ಅಥವಾ ಸ್ಥಿರಾಸ್ತಿ ಸೇರಿದಂತೆ ಗ್ಯಾರಂಟಿ(ಗಳು) ಮತ್ತು ಅದೇ ಐಎಆರ್‌ಸಿಎಲ್ ನಿಂದ ಮರುಸಂಖ್ಯೆಯನ್ನು ಮಾಡಲಾಗಿದೆ ಮತ್ತು ಕ್ರಮವಾಗಿ ಹೊಸ ಸಾಲ ಖಾತೆ ಸಂಖ್ಯೆ **V024OXXIII** ಮತ್ತು **V025OXXIII** ಅನ್ನು ಹೊಂದಿದೆ. **29.06.2022** ದಿನಾಂಕದ ನಿಯೋಜನೆ ಒಪ್ಪಂದದ ಪ್ರಕಾರ **ಎ.ಸಿ.ಆರ್.ಇ -102-ಟ್ರಸ್ಟ್‌ನ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುವ, ಸುರಕ್ಷಿತ ಸಾಲಗಾರನಿಗೆ ಮತ್ತು ಪರವಾಗಿ ಈ ಸಾಲದ ಖಾತೆಗಳನ್ನು ಐಎಆರ್‌ಸಿಎಲ್ ನಿಂದ ನಿಯೋಜಿಸಲಾಗಿದೆ. ಸದರಿ ಸಾಲ ಖಾತೆಗಳನ್ನು ಅಸೆಟ್ಸ್ ಕೇರ್ ರಿಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿಮಿಟೆಡ್, **ಎ.ಸಿ.ಆರ್.ಇ-102-ಟ್ರಸ್ಟ್‌ನ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುತ್ತಿದ್ದು, ಅವರು ದಿನಾಂಕ **23.06.2025**ರ ನಿಯೋಜನೆ ಒಪ್ಪಂದದ ಮೂಲಕ **ಎ.ಸಿ.ಆರ್.ಇ-180-ಟ್ರಸ್ಟ್‌ನ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುತ್ತಿರುವ ಸುರಕ್ಷಿತ ಸಾಲದಾತರಿಗೆ ಪರವಾಗಿ ನಿಯೋಜಿಸಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 49,00,000/- (ರೂಪಾಯಿ ನಲವತ್ತ ಒಂಬತ್ತು ಲಕ್ಷ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್‌ಮನಿ ಡಿಪಾಸಿಟ್ (**''ಇಎಮ್‌ಡಿ''**) **ರೂ. 4,90,000/- (ರೂಪಾಯಿ ನಾಲ್ಕು ಲಕ್ಷ ತೊಂಬತ್ತು ಸಾವಿರ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

3ನೇ ಮಹಡಿಯಲ್ಲಿ ಆಸ್ತಿ ಹೊಂದಿರುವ ಫ್ಲಾಟ್ ನಂ. 11, **ಪ್ರಸ್ತುತ ಬಿಬಿಎಂಪಿ ನಂ.** 45, **ಪಿಐಡಿ ನಂ.** 96-310-45, **ಸೌತ್ ಬ್ಲಾಕ್, ಸುಮಾರು** 1349 **ಚದರ ಅಡಿಗಳ ಸೂಪರ್ ಬಿಲ್ಟ್-ಅಪ್ ಪ್ರದೇಶ, ಎರಡು ಬೆಡ್‌ರೂಮ್‌ಗಳು, ಹಾಲ್, ಕಿಚನ್, ಬಾತ್ ರೂಮ್ ಟಾಯ್ಲೆಟ್‌ಗಳು, ಎಸ್. ಟಿ. ಎಫ್ ನಂ.** 11 **ಹೊಂದಿರುವ ಬೇಸ್‌ಮೆಂಟ್ ಮಹಡಿಯಲ್ಲಿ ಒಂದು ಮುಚ್ಚಿದ ಕಾರ್ ಪಾರ್ಕಿಂಗ್ ಸ್ಥಳದೊಂದಿಗೆ, ''ಈಶ್ವರಿ ಎನ್‌ಕ್ಲೇವ್'' ಎಂದು ಕರೆಯಲ್ಪಡುವ ಬಹುಮಹಡಿ ವಸತಿ ಕಟ್ಟಡದಲ್ಲಿ ಪ್ಯಾಸೇಜ್‌ಗಳು, ಲಾಬಿಗಳು, ಮೆಟ್ಟಿಲುಗಳು, ಇತ್ಯಾದಿ : ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಹಂಚಿಕೆಯನ್ನು ಒಳಗೊಂಡಂತೆ (ಸ್ಥಿರ ಆಸ್ತಿಯಲ್ಲಿ** 290 **ಚದರ ಅಡಿಯ ಅವಿಭಜಿತ ಪಾಲು, ಶೀರ್ಷಿಕೆ, ಆಸಕ್ತಿ), ಆಸ್ತಿ ಹೊಂದಿರುವ ನಂ.** 45, **ಬಿಬಿಎಂಪಿ ಹೊಸ ಸಂಖ್ಯೆ** 45, **ಪಿಐಡಿ ಸಂಖ್ಯೆ** 96-310-45 **ಯನ್ನು ಹೊಂದಿದೆ. ಹಿಂದೆ ಸರ್ವೆ ನಂ.** 28/4 **ರ ಭಾಗವಾಗಿತ್ತು,** 8**ನೇ ಎ ಕ್ರಾಸ್, ಕನಕ ನಗರ, ವಾರ್ಡ್ ನಂ.** 86, **ವಿಶ್ವನಾಥ ನಾಗೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸ್ಥಿತವಾಗಿದ್ದು ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ.** 96**ರ ವ್ಯಾಪ್ತಿಗೆ ಬರುತ್ತದೆ, ಬೆಂಗಳೂರು -** 560025, **ಕರ್ನಾಟಕ.**

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.acreindia.in; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ಸಹಿ
ಅಧಿಕೃತ ಅಧಿಕಾರಿ
ದಿನಾಂಕ : 07.11.2025 **ಅಸೆಟ್ಸ್ ಕೇರ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿ**
ಸ್ಥಳ : ಬೆಂಗಳೂರು **ಎ.ಸಿ.ಆರ್.ಇ -180 -ಟ್ರಸ್ಟ್‌ನ ಟ್ರಸ್ಟೀ .**

''ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹಮ್ಮದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್ : complaint@acreindia.in ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ಪಾಲಿಸಿಯನ್ನು https://www.acreindia.in/compliance ನಲ್ಲಿ ಪಡೆಯಬಹುದು''.

SUBEX

ಸುಬೆಕ್ಸ್ ಲಿಮಿಟೆಡ್
(ಸಿಐಎನ್: L85110KA1994PLC016663)
ನೋಂದಾಯಿತ ಕಚೇರಿ: ಪ್ರೈಟೆಕ್ ಪಾರ್ಕ್ - ಎಸ್‌ಇಝೆಡ್, ಬ್ಲಾಕ್-09, 4ನೇ ಮಹಡಿ, ಬಿ ವಿಂಗ್, ಸರ್ವೆ ನಂ. 51 ರಿಂದ 64/4, ಹೊರವರ್ತುಲ ರಸ್ತೆ, ಬೆಳ್ಳಂದೂರು ವಿಲೇಜ್, ವರ್ತೂರು ಹೋಬಳಿ, ಬೆಂಗಳೂರು-560103 ದೂರವಾಣಿ: 080 3745 1377
ಇಮೇಲ್: info@subex.com ವೆಬ್‌ಸೈಟ್: www.subex.com

ಸೆಪ್ಟೆಂಬರ್ 30, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕದ ಅಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಪ್ರತಿ ಷೇರಿನ ದತ್ತಾಂಶ ಹೊರತುಪಡಿಸಿ ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿವರಗಳು	ಸೆಪ್ಟೆಂಬರ್ 30, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ	ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ವಾರ್ಷಿಕ	ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ
1	ಕಾರ್ಯಾಚರಣೆಗಳಿಂದ ಬಂದ ಆದಾಯ	6,891	28,561	7,416
2	ಅವಧಿಯ ನಿವ್ವಳ ಲಾಭ/(ನಷ್ಟ) (ತೆರಿಗೆ, ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ಮುನ್ನ#)	422	(2,404)	(123)
3	ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	422	(1,982)	299
4	ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	286	(3,144)	62
5	ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯು ಒಳಗೊಂಡ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	376	(2,992)	126
6	ಪಾವತಿಸಿದ ಈಕ್ವಿಟಿ ಶೇರು ಬಂಡವಾಳ (ಮುಖಬೆಲೆ ರೂ. 5 ಪ್ರತಿಯೊಂದಕ್ಕೆ)	28,100	28,100	28,100
7	ವರ್ಷದ ಆಡಿಟೆಡ್ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವ ಮೀಸಲುಗಳು (ಮರುಮೌಲೀಕೃತ ಮೀಸಲುಗಳನ್ನು ಹೊರತುಪಡಿಸಿ)	-	2,348	-
8	ಪ್ರತಿ ಶೇರಿನ ಗಳಿಕೆ (ರೂ. 5/- ಪ್ರತಿಯೊಂದಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರೆಸಲು ಮತ್ತು ನಿಲ್ಲಿಸಿದೆ)			
	1. ಮೂಲ:	0.05	(0.57)	0.01
	2. ವಿಭಜಿತ:	0.05	(0.57)	0.01

ಪ್ರತ್ಯೇಕ ಆರ್ಥಿಕ ಫಲಿತಾಂಶಗಳ ಕುರಿತು ಹೆಚ್ಚುವರಿ ಮಾಹಿತಿ ಈ ಕೆಳಗಿನಂತಿದೆ:-

ಕ್ರ. ಸಂ.	ವಿವರಗಳು	ಸೆಪ್ಟೆಂಬರ್ 30, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ	ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ವಾರ್ಷಿಕ	ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ
1	ಕಾರ್ಯಾಚರಣೆಗಳಿಂದ ಬಂದ ಆದಾಯ (ಅಸಾಧಾರಣ ವಸ್ತುಗಳು ಮತ್ತು ಇತರ ಆದಾಯದ ಮೊದಲು ಎಲ್‌ಎಲ್‌ಪಿಯಿಂದ ಬಂದ ಲಾಭದ ಪಾಲನ್ನು ಹೊರತುಪಡಿಸಿ)	6,351	26,881	6,848
2	ಅವಧಿಯ ನಿವ್ವಳ ಲಾಭ/(ನಷ್ಟ) (ತೆರಿಗೆಯ, ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ಮುನ್ನ#)	(264)	(5,001)	(826)
3	ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	(264)	(4,579)	(404)
4	ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	(336)	(4,978)	(458)
5	ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯು ಒಳಗೊಂಡ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(365)	(4,990)	(486)

ಟಿಪ್ಪಣಿ: ಎ) ಮೇಲಿನ ಸಾರಸತ್ವವು 2015ರ ಸೆಬಿಯ (ಲಿಸ್ಟಿಂಗ್ ಬಾಧ್ಯತೆ ಮತ್ತು ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿಸ್ತೃತ ನಮೂನೆಯ ಸಾರಾಂಶವಾಗಿದೆ. ತ್ರೈಮಾಸಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಮತ್ತು ಕಂಪನಿಯ ವೆಬ್‌ಸೈಟ್ www.subex.com ನಲ್ಲಿ ಸಹ ಲಭ್ಯವಿದೆ.
ಬಿ) # - ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳನ್ನು Ind AS ನಿಯಮಗಳು/ AS ನಿಯಮಗಳ ಅನ್ವಯ ಲಾಭ ಮತ್ತು ನಷ್ಟದ ವಿವರಣೆಯಲ್ಲಿ ಯಾವುದು ಅನ್ವಯಿಸುವುದೋ ಅದಕ್ಕೆ ಸರಿಹೊಂದಿಸಲಾಗಿದೆ.

ಮಂಡಳಿಯ ಆದೇಶದ ಮೇರೆಗೆ
ಸಹಿ/-
ನಿಶಾ ದತ್
ವ್ಯವಸ್ಥಾಪಕ ನಿರ್ದೇಶಕಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
DIN: 06465957

ಸ್ಥಳ : ಬೆಂಗಳೂರು
ದಿನಾಂಕ : ನವೆಂಬರ್ 11, 2025

THIS IS A PUBLIC ANNOUNCEMENT FOR INFORMATION PURPOSES ONLY. THIS IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES. NOT FOR RELEASE, PUBLICATION OR DISTRIBUTION DIRECTLY OR INDIRECTLY OUTSIDE INDIA.
Initial Public Offer of equity shares on the main board of BSE Limited (**"BSE"**) and National Stock Exchange of India Limited (**"NSE"**, and together with BSE, the **"Stock Exchanges"**) in compliance with Chapter II of the Securities and Exchange Board of India (Issue of Capital and Disclosure Requirements) Regulations, 2018, as amended (**"SEBI ICDR REGULATIONS, 2018"**).

(Please scan this QR code to view the RHP)

EMMVEE

EMMVEE PHOTOVOLTAIC POWER LIMITED

Our Company was originally incorporated as *"Emmvee Toughened Glass and Photovoltaics Private Limited"* as a private limited company under the provisions of the Companies Act, 1956, pursuant to a certificate of incorporation dated March 21, 2007, issued by the RoC. Pursuant to a change in the name of our Company to *"Emmvee Photovoltaic Power Private Limited"*, a fresh certificate of incorporation dated November 10, 2010, was issued by the RoC. The name change was undertaken to align with the current business growth and product portfolio of our Company and global renewable energy scenario. Subsequently, our Company was converted to a public limited company and the name of our Company changed to *"Emmvee Photovoltaic Power Limited"* pursuant to approval by our Board pursuant to resolution dated April 28, 2025 and Shareholders pursuant to an extra ordinary general meeting dated April 29, 2025 and a fresh certificate of incorporation dated May 7, 2025 was issued by the central processing centre, MCA, Haryana. For further details, see *"History and Certain Corporate Matters – Brief History of our Company"* on page 256 of the red herring prospectus dated November 5, 2025, read with addendum to the red herring prospectus dated November 8, 2025 (collectively referred to as "**RHP**" or "**Red Herring Prospectus**") filed with the RoC.

Registered and Corporate Office: 13/1, International Airport Road, Bettahalasur Post, Bengaluru, Karnataka, 562 157, India
Tel: +91 80 2217 4524; **Website:** www.emmveepv.com; **Contact Person:** Shailesha Barve, Company Secretary and Compliance Officer; **E-mail:** investorrelations@emmvee.in; **Corporate Identity Number:** U26101KA2007PLC042197

OUR PROMOTERS: MANJUNATHA DONTHI VENKATARATHNAIAH, SHUBHA MANJUNATHA DONTHI, SUHAS DONTHI MANJUNATHA AND SUMANTH MANJUNATHA DONTHI

INITIAL PUBLIC OFFER OF UP TO [●] EQUITY SHARES OF FACE VALUE OF ₹2 EACH ("EQUITY SHARES") OF EMMVEE PHOTOVOLTAIC POWER LIMITED ("COMPANY") FOR CASH AT A PRICE OF ₹[●] PER EQUITY SHARE (INCLUDING A SHARE PREMIUM OF ₹[●] PER EQUITY SHARE) ("OFFER PRICE") AGGREGATING UP TO ₹29,000.00 MILLION COMPRISING A FRESH ISSUE OF UP TO [●] EQUITY SHARES OF FACE VALUE OF ₹2 EACH AGGREGATING UP TO ₹21,438.62 MILLION BY OUR COMPANY ("FRESH ISSUE") AND AN OFFER FOR SALE OF UP TO [●] EQUITY SHARES OF FACE VALUE OF ₹2 EACH AGGREGATING UP TO ₹7,561.38 MILLION COMPRISING OF UP TO [●] EQUITY SHARES OF FACE VALUE OF ₹2 EACH AGGREGATING UP TO ₹3,780.69 MILLION BY MANJUNATHA DONTHI VENKATARATHNAIAH AND UP TO [●] EQUITY SHARES OF FACE VALUE OF ₹2 EACH AGGREGATING UP TO ₹3,780.69 MILLION BY SHUBHA MANJUNATHA DONTHI (THE "PROMOTER SELLING SHAREHOLDERS") AND SUCH EQUITY SHARES OFFERED BY THE PROMOTER SELLING SHAREHOLDERS ("OFFER FOR SALE" AND TOGETHER WITH THE FRESH ISSUE, THE "OFFER").

DETAILS OF THE OFFER FOR SALE AND WEIGHTED AVERAGE COST OF ACQUISITION

NAME OF THE SELLING SHAREHOLDERS	TYPE	NUMBER OF EQUITY SHARES OF FACE VALUE OF ₹2 EACH OFFERED AMOUNT (IN ₹ MILLION)	WEIGHTED AVERAGE COST OF ACQUISITION PER EQUITY SHARE (IN ₹)*
Manjunatha Donthi Venkatarathnaiah	Promoter Selling Shareholder	Up to [●] equity shares of face value of ₹2 each aggregating up to ₹3,780.69 million	0.20
Shubha Manjunatha Donthi	Promoter Selling Shareholder	Up to [●] equity shares of face value of ₹2 each aggregating up to ₹3,780.69 million	0.20

**As certified by S K Patodia & Associates LLP, Chartered Accountants, by way of their certificate dated November 8, 2025. For further details, see "The Offer" on page 82 of the RHP.*

PRICE BAND: ₹206 TO ₹217 PER EQUITY SHARE OF FACE VALUE OF ₹2 EACH.
THE FLOOR PRICE IS 103.00 TIMES THE FACE VALUE OF THE EQUITY SHARES AND THE CAP PRICE IS 108.50 TIMES THE FACE VALUE OF THE EQUITY SHARES.
BIDS CAN BE MADE FOR A MINIMUM OF 69 EQUITY SHARES OF FACE VALUE OF ₹ 2 EACH AND IN MULTIPLES OF 69 EQUITY SHARES BEARING FACE VALUE OF ₹2 EACH THEREAFTER.
THE PRICE TO EARNINGS RATIO ("P/E") BASED ON DILUTED EPS FOR FISCAL 2025 FOR THE COMPANY AT THE UPPER END OF THE PRICE BAND IS 34.89 TIMES AND AT THE LOWER END OF THE PRICE BAND IS 33.12 TIMES.
WEIGHTED AVERAGE RETURN ON NETWORTH FOR LAST THREE FINANCIAL YEARS IS 41.75%.

BID/OFFER PERIOD	BID/OFFER CLOSES TODAY#

#The UPI mandate end time and date shall be at 5.00 p.m. on the Bid/ Offer Closing Date.

We are primarily a solar module manufacturer and are the second largest pure-play integrated solar PV module and solar cell manufacturing company and one of the largest solar PV module manufacturers in India, each in terms of production capacity as of March 31, 2025 (Source: Crisil Report). Our product portfolio comprises bifacial and mono-facial formats of TOPCon modules and cells, and Mono PERC modules. We are an ALMM-enlisted module manufacturer and operate four manufacturing units across two locations in Karnataka.

THE OFFER IS BEING MADE THROUGH THE BOOK BUILDING PROCESS IN ACCORDANCE WITH REGULATION 6(2) OF THE SEBI ICDR REGULATIONS, 2018.
THE EQUITY SHARES OF OUR COMPANY WILL GET LISTED ON THE MAIN BOARDS OF BSE LIMITED AND THE NATIONAL STOCK EXCHANGE OF INDIA LIMITED.
NATIONAL STOCK EXCHANGE OF INDIA LIMITED SHALL BE THE DESIGNATED STOCK EXCHANGE.
QIB PORTION: NOT LESS THAN 75% OF THE OFFER | NON-INSTITUTIONAL PORTION: NOT MORE THAN 15% OF THE OFFER | RETAIL PORTION: NOT MORE THAN 10% OF THE OFFER

IN MAKING AN INVESTMENT DECISION, POTENTIAL INVESTORS MUST ONLY RELY ON THE INFORMATION INCLUDED IN THE RHP AND THE TERMS OF THE OFFER, INCLUDING THE RISKS INVOLVED AND NOT RELY ON ANY OTHER EXTERNAL SOURCES OF INFORMATION ABOUT THE OFFER AVAILABLE IN ANY MANNER. IN RELATION TO PRICE BAND, POTENTIAL INVESTORS SHOULD ONLY REFER TO THIS PRICE BAND ADVERTISEMENT FOR THE OFFER AND SHOULD NOT RELY ON ANY MEDIA ARTICLES / REPORTS IN RELATION TO THE VALUATION OF THE COMPANY AS THESE ARE NOT ENDORSED, PUBLISHED OR CONFIRMED EITHER BY THE COMPANY OR THE BOOK RUNNING LEAD MANAGERS TO THE OFFER ("BRLMs").

IN ACCORDANCE WITH THE RECOMMENDATION OF THE COMMITTEE OF INDEPENDENT DIRECTORS OF OUR COMPANY, PURSUANT TO THEIR RESOLUTION DATED NOVEMBER 5, 2025, THE ABOVE PROVIDED PRICE BAND IS JUSTIFIED BASED ON QUANTITATIVE FACTORS/ KPIS DISCLOSED IN THE *'BASIS FOR OFFER PRICE'* SECTION ON PAGE 122 OF THE RHP *VIS-A-VIS* THE WEIGHTED AVERAGE COST OF ACQUISITION ("WACA") OF PRIMARY AND SECONDARY TRANSACTION(S), AS APPLICABLE, DISCLOSED IN *'BASIS FOR OFFER PRICE'* SECTION ON PAGE 122 OF THE RHP.

RISK TO INVESTORS

For details refer to section titled "Risk Factors" on page 31 of the RHP

1. **Dependence on a limited number of customers. Our largest customer contributed 36.57% of our revenue from operations in the three months ended June 30, 2025. The loss of such customer is a significant risk and could have a material adverse effect on our business, financial condition, results of operations and cash flows.**
   We generate a significant portion of our revenue from, and are therefore dependent on certain key customers. The table below sets forth the revenue generated from our largest, top 5 and top 10 customers, including as a percentage of our revenue from operations, in the periods indicated:

Particulars	Three Months ended June 30, 2025		Three Months ended June 30, 2024		Fiscal 2025		Fiscal 2024		Fiscal 2023	
	Amount (₹ million)	Percentage of Revenue from Operations (%)	Amount (₹ million)	Percentage of Revenue from Operations (%)	Amount (₹ million)	Percentage of Revenue from Operations (%)	Amount (₹ million)	Percentage of Revenue from Operations (%)	Amount (₹ million)	Percentage of Revenue from Operations (%)
Revenue from largest customer	3,758.73	36.57%	1,352.58	40.59%	8,385.30	35.90%	2,040.62	21.44%	1,290.27	20.87%
Revenue from top 5 customers	8,851.05	86.11%	2,564.84	76.97%	17,541.04	75.10%	6,455.05	67.81%	3,871.08	62.63%
Revenue from top 10 customers	9,657.72	93.96%	2,983.02	89.52%	19,848.88	84.98%	8,169.05	85.82%	4,978.02	80.53%

Note:
(1)References to 'customers' are to customers in a particular period / Fiscal and do not refer to the same customers across all periods / Fiscals.
Any reduction or cancellation of orders from our key customers, failure to renew contracts with them on favourable terms or the loss of any one or more of our key customers for any reason (including due to ongoing disputes with them or any financial hardship experienced by them, such as bankruptcy or liquidation) could have an adverse effect on our business, results of operations and financial condition.

2. **We generated 99.42% of our revenue from operations from the sale of TOPCon modules and Mono PERC modules in the three months ended June 30, 2025. A reduction in demand for these products or a decrease in revenue generated from these products is a significant risk and may adversely affect our revenues, financial condition and cash flows.**
   Our portfolio of products comprises bifacial and mono-facial formats of TOPCon modules, as well as bifacial and mono-facial formats of Mono PERC modules. The table below provide details of revenues from the products that we manufacture in the periods indicated:

Particulars	Three Months ended June 30, 2025		Three Months ended June 30, 2024		Fiscal 2025		Fiscal 2024		Fiscal 2023	
	Amount (₹ million)	Percentage of Revenue from Operations (%)	Amount (₹ million)	Percentage of Revenue from Operations (%)	Amount (₹ million)	Percentage of Revenue from Operations (%)	Amount (₹ million)	Percentage of Revenue from Operations (%)	Amount (₹ million)	Percentage of Revenue from Operations (%)
Revenue from the sale of TOPCon modules(1)	8,129.46	79.09%	1,500.60	45.03%	16,105.48	68.96%	-	-	-	-
Revenue from the sale of Mono PERC modules(1)	2,089.84	20.33%	1,766.99	53.02%	7,022.65	30.07%	8,167.60	85.80%	3,397.77	54.96%
Revenue from the sale of polycrystalline modules(2)	1.39	0.01%	32.46	0.97%	128.20	0.55%	1,247.79	13.11%	2,648.00	42.85%
Total	**10,220.69**	**99.44%**	**3,300.05**	**99.03%**	**23,256.33**	**99.57%**	**9,415.39**	**98.91%**	**6,045.77**	**97.81%**

Notes:
(1)Includes both mono-facial and bifacial formats.
(2)Unit I which manufactured polycrystalline modules has been retired and its operations have been discontinued with effect from May 31, 2025.
Our business is subject to changes in demand for solar PV modules. If demand for solar productions and relevant technologies weakens, our productivity, business prospects and future financial performance may be adversely affected.

3. **Under-utilization of our manufacturing capabilities or an inability to effectively utilize our current and proposed production capacities could have an adverse effect on our business, financial condition, results of operations and cash flows**
   An inability to effectively utilize our current and proposed production capacities at our manufacturing units may adversely affect our business, results of operations and cash flows. Fluctuating demand for our products can hinder accurate estimation of future customer needs, complicating production scheduling, which may lead to overproduction for certain products and under-utilization for others. The table below sets forth information relating to the capacity utilization for our current manufacturing units for the years indicated:

Particulars	As of / for the three months ended June 30, 2025	As of / for the three months ended June 30, 2024	As of / for the financial year ended March 31, 2025	As of / for the financial year ended March 31, 2024	As of / for the financial year ended March 31, 2023
Unit I (Modules)					
Capacity utilization (%)	0.00%	54.12%	24.84%	13.85%	22.53%
Unit II (Modules)					
Capacity utilization (%)	40.66%	84.98%	84.28%	57.52%	20.87%
Unit III					
Solar Cells					
Capacity utilization (%)	66.95%	-	42.83%	-	-
Solar PV Module					
Capacity utilization (%)	53.50%	-	54.33%	-	-
Unit IV (Modules)					
Capacity utilization (%)	58.71%	-	34.41%	-	-
Unit V (Modules)					
Capacity utilization (%)	19.26%	-	-	-	-

Notes:
(1) Capacity utilization is a measure of how much of a manufacturing plant's production capacity is being used. It is a ratio that compares the potential output against the actual output. Capacity utilisation has been calculated based on actual production during the relevant period / fiscal, divided by the aggregate effective installed capacity of the manufacturing plant for the relevant fiscal. In case of capacity utilization for Unit III and Unit IV in Fiscal 2025 and for Unit V for the three months ended June 30, 2025, capacity utilization has been calculated by dividing the actual production for the period post commissioning of Unit III (i.e. September 1, 2024), Unit IV (i.e. January 6, 2025) and Unit V (i.e. April 30, 2025) pro-rata the effective installed capacity.

4. **Suppliers concentration risk. Our purchases from our top five suppliers constituted 43.29% of our total purchases in the three months ended June 30, 2025. Any disruptions in the supply of raw materials from these suppliers may have an adverse impact on our business operations, cash flows and financial condition.**
   We depend on external Indian and foreign third party suppliers for certain raw materials required for our manufacturing operations, and we typically source them on a purchase order basis from such suppliers. We do not enter into formal long-term agreements with our suppliers. The table below sets forth details of our purchases from our largest, top 5 and top 10 suppliers, including as a percentage of our total expenses, in the periods indicated:

Particulars	Three Months ended June 30, 2025		Three Months ended June 30, 2024		Fiscal 2025		Fiscal 2024		Fiscal 2023	
	Amount (₹ million)	Percentage of Total Purchases (%)	Amount (₹ million)	Percentage of Total Purchases (%)	Amount (₹ million)	Percentage of Total Purchases (%)	Amount (₹ million)	Percentage of Total Purchases (%)	Amount (₹ million)	Percentage of Total Purchases (%)
Purchases from top five suppliers	3,682.11	43.29%	1,127.15	45.64%	5,914.52	32.11%	3,486.14	37.95%	2,201.14	42.23%
- Indian suppliers	-	-	-	-	-	-	939.94	10.23%	625.94	12.01%
- Foreign suppliers	3,682.11	43.29%	1,127.15	45.64%	5,914.52	32.11%	2,546.20	27.72%	1,575.20	30.22%
Purchases from top 10 suppliers	5,858.73	68.88%	1,644.78	66.60%	9,744.24	52.91%	5,366.09	58.41%	3,146.68	60.37%
- Indian suppliers	-	-	171.07	6.93%	-	-	1,283.01	13.97%	773.74	14.84%
- Foreign suppliers	5,858.73	68.88%	1,473.71	59.68%	9,744.24	52.91%	4,083.08	44.44%	2,372.94	45.53%

   There can be no assurance that we will be able to procure the required quantities and quality of materials commensurate with our requirements in a timely manner from such suppliers, or that a particular supplier will continue to supply us with materials in the future.

5. **The cost of raw materials imported by us from other countries comprised 94.65% of our total purchases in the three months ended June 30, 2025. Any disruptions in the import and supply of these imported raw materials may adversely affect our operations, business and financial condition.**
   We import a significant portion of the materials used in the manufacturing of solar cells and solar PV modules from foreign countries, particularly China and other countries, namely Vietnam, Thailand and Malaysia. The table below sets forth our cost of imported raw materials from China and other countries, including as a percentage of total purchases, in the periods indicated:

Particulars	Three Months ended June 30, 2025		Three Months ended June 30, 2024		Fiscal 2025		Fiscal 2024		Fiscal 2023	
	Amount (₹ million)	Percentage of Total Purchases (%)	Amount (₹ million)	Percentage of Total Purchases (%)	Amount (₹ million)	Percentage of Total Purchases (%)	Amount (₹ million)	Percentage of Total Purchases (%)	Amount (₹ million)	Percentage of Total Purchases (%)
Cost of imported materials from China(1)	4,652.56	54.70%	1,731.57	70.12%	10,263.50	55.73%	5,810.72	63.25%	2,737.35	52.51%
Cost of imported materials from other countries(1)(2)	3,397.40	39.94%	18.82	0.76%	2,909.15	15.80%	292.74	3.19%	816.58	15.66%
Total	**8,049.96**	**94.65%**	**1,750.40**	**70.88%**	**13,172.65**	**71.53%**	**6,103.47**	**66.44%**	**3,553.93**	**68.17%**

Notes:
(1)Cost of imported materials excludes costs incurred due to payment of custom duties.
(2)These include Vietnam, Malaysia and Thailand.
The imposition of any restrictions, either from the Government of India or any state or provincial government, governmental authority or the government of the People's Republic of China, or from restrictions imposed by any other applicable authorised bilateral or multilateral organisations, on such imports from China in which our principal suppliers are located, may adversely affect our business, results of operations and prospects.

6. **Dependence on order book and risk of cancellation, modifications or delays**
   The growth of our order book is a cumulative indication of the revenues that we expect to recognize in future periods with respect to our existing contracts. We cannot guarantee that the income anticipated in our order book will be realized, or, if realized, will be realized on time or result in profits. The table below provides details of our outstanding order book of solar PV modules as at the dates indicated:

Particulars	As of June 30, 2025	As of June 30, 2024	As of March 31, 2025	As of March 31, 2024	As of March 31, 2023
Outstanding order book of solar PV modules (GW)	5.36	3.29	4.89	1.10	0.54
Estimated order value of outstanding order book (₹ million)	78,117.26	60,229.00	77,789.00	23,301.20	12,943.92

7. **Geographic concentration of manufacturing facilities in the state of Karnataka, India**
